# ಹಂಪಿ ಟೈಮ್ಸ್
# HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



With Your support we reach
30,000+
HAMPI TIMES epaper readers
ನಿಮ್ಮ ನೆಚ್ಚಿನ ಗ್ರಾಹಕರಿಗೆ ನಿಮ್ಮ ಉತ್ಪನ್ನ ಹಾಗೂ ಸೇವೆಯ ಮಾಹಿತಿ ತಲುಪಿಸಲು ಸಂಪರ್ಕಿಸಿ
PRINT & DIGITAL Advertisement
Valmiki Circle, Hosapete-583201
9448633038
hampitimes@gmail.com
www.hampitimes.com
epaper.hampitimes.com





ಸಂಪುಟ:01 • ಸಂಚಿಕೆ:175 • ನೋಂದಣಿ ನಂ.:KARKAN27911 • ವಿಜಯನಗರ • 05.12.2023 • ಮಂಗಳವಾರ • ಪುಟ:04 • ಬೆಲೆ:2
Volume:01 • Issue:175 • Reg.No:KARKAN27911 • VIJAYANAGARA • 05.12.2023 • Tuesday • Page:04 • Rs:2







ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


**PLACE YOUR AD**
HOUSE RENT / SALE / LEASE, CHANGE OF NAME,
Notice Advertisement. & EVENT COVERAGE
Contact
9448633038
Near Valmiki Circle,
HOSAPETE-583201
Email:hampitimes@gmail.com


# ಚೆಲ್ಲಾಟ ಬೇಡ ಸೇವಾ ಭದ್ರತೆ ಒದಗಿಸಿ

## ಅತಿಥಿ ಉಪನ್ಯಾಸಕರ ಹೋರಾಟಕ್ಕೆ ಕಿವಿಗೊಡದ ಸರ್ಕಾರದ ವಿರುದ್ಧ ಆಕ್ರೋಶ | ಜಿಲ್ಲಾಧಿಕಾರಿ ಮೂಲಕ ಸಿಎಂಗೆ ಮನವಿ

**■ ಹಂಪಿ ಟೈಮ್ಸ್ ಹೊಸಪೇಟೆ**

ವಿದ್ಯಾರ್ಥಿಗಳನ್ನು ಭವ್ಯ ಭಾರತದ ಪ್ರಜೆಗಳನ್ನಾಗಿ ರೂಪಿಸುತ್ತಿರುವ ಅತಿಥಿ ಉಪನ್ಯಾಸಕರ ಸಮಸ್ಯೆ ಕೇಳುವವರಿಲ್ಲದಂತಾಗಿದೆ. ಬಡ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿರುವ ಸಿಎಂ ಸಿದ್ದರಾಮಯ್ಯನವರು ಗಮನಹರಿಸಬೇಕು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘ ಗೌರವಾಧ್ಯಕ್ಷ ದುರುಗಪ್ಪ ಒತ್ತಾಯಿಸಿದರು.

ಅತಿಥಿ ಉಪನ್ಯಾಸಕರ ಸೇವೆಗೆ ಭದ್ರತೆ ಒದಗಿಸಿ ಬಾಕಿ ವೇತನ ನೀಡಬೇಕೆಂದು ಒತ್ತಾಯಿಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದಿಂದ ಸೋಮವಾರ ನಗರದಲ್ಲಿ ಪ್ರತಿಭಟನೆ ನಡೆಯಿತು.

ನಗರದ ಡಾ.ಪುನೀತ್ ರಾಜ್‌ಕುಮಾರ್ ಸರ್ಕಲ್‌ನಿಂದ ಆರಂಭಗೊಂಡ ಪ್ರತಿಭಟನೆ ವಾಲ್ಮೀಕಿ ಸರ್ಕಲ್, ಡ್ಯಾಂ ರಸ್ತೆ ಮಾರ್ಗವಾಗಿ ಜಿಲ್ಲಾಧಿಕಾರಿ



ಕಚೇರಿಗೆ ತಲುಪಿ, ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿ ಮಾತನಾಡಿದರು. ಅತಿಥಿ ಉಪನ್ಯಾಸಕರು ಕಳೆದ 12 ದಿನಗಳಿಂದ ಪ್ರತಿಭಟನೆಯಲ್ಲಿ ತೊಡಗಿದ್ದರೂ ವಿರೋಧಪಕ್ಷದ ನಾಯಕರಾಗಲಿ, ಸರ್ಕಾರದ ಮಂತ್ರಿಗಳಾಗಲಿ ಗಮನಹರಿಸುತ್ತಿಲ್ಲ. ಹೀಗೆ ಮುಂದುವರೆದರೆ ಮಕ್ಕಳ ಉನ್ನತ ಶಿಕ್ಷಣದ ಕನಸು ಕಮರಲಿದೆ. ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸುಮಾರು 10200 ಅತಿಥಿ ಉಪನ್ಯಾಸಕರು ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಕನಿಷ್ಠ ವೇತನ ಮತ್ತು ಸೇವಾ ಭದ್ರತೆಯಿಲ್ಲದೇ ಅತಿಥಿ ಉಪನ್ಯಾಸಕರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಕೂಡಲೆ ಸೇವಾ ಭದ್ರತೆ ನೀಡಬೇಕು ಎಂದು ಆಗ್ರಹಿಸಿದರು.

ದೇಶದ ವಿವಿಧ ರಾಜ್ಯಗಳಲ್ಲಿ ಅತಿಥಿ ಉಪನ್ಯಾಸಕರನ್ನು ಖಾಯಂ ಗೊಳಿಸಲಾಗಿದೆ. ವೇತನವನ್ನೂ ಹೆಚ್ಚಿಸಲಾಗಿದೆ. ಕರ್ನಾಟಕದಲ್ಲಿ ಜೆಓಸಿ ವಿಭಾಗ, ಮೊರಾರ್ಜಿ ದೇಸಾಯಿ, ಕಿತ್ತೂರುರಾಣಿ ಚೆನ್ನಮ್ಮ ವಸತಿ ಶಾಲೆ ಮತ್ತು ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿದ್ದ ಶಿಕ್ಷಕರು, ಪ್ರಾಚಾರ್ಯರನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ. ಅದರಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸೇವೆಯನ್ನು ಖಾಯಂಗೊಳಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಉಪನ್ಯಾಸಕರು ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಗುಜ್ಜಲ ಹುಲುಗಪ್ಪ, ಎ.ಮಲ್ಲಿಕಾರ್ಜುನ, ಎಂ.ಶಿವಮೂರ್ತಿ, ಸೋಮೇಶ ಉಪ್ಪಾರ, ಡಾ.ಷಣ್ಮುಖಪ್ಪ, ಡಾ.ನಾಗವೇಣಿ ಸೊಸಲೆ, ಗಿರಿಜಾ ಸೇರಿದಂತೆ ಮರಿಯಮ್ಮನಹಳ್ಳಿ, ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ ಅತಿಥಿ ಉಪನ್ಯಾಸಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ಮೈಕ್ರೋ ನ್ಯೂಸ್

### ಡಾ.ಬಿ.ಆರ್.ಅಂಬೇಡ್ಕರ್ ಓದು ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ದೇಶ ಕಂಡ ಮಹಾನ್ ವ್ಯಕ್ತಿತ್ವದ ಅಂಬೇಡ್ಕರ್ ಅವರ ಬದುಕು ಬರಹಗಳನ್ನು ನಾವೆಲ್ಲಾ ನಿಜವಾಗಿ ಓದಿ ಅರ್ಥೈಸಿಕೊಳ್ಳಬೇಕಿದೆ ಎಂದು ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಸುಲೇಖಾ.ಬಿ ಅವರು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಓದು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳು ನಮಗೆಲ್ಲಾ ಸ್ಫೂರ್ತಿಯಾಗಿದ್ದು, ಅವರನ್ನು ಸಮಗ್ರವಾಗಿ ಅರಿಯುವ ಕಾರ್ಯವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡುತ್ತಿದೆ. ಅದರ ಸದುಪಯೋಗ ಪಡೆದು ವಿದ್ಯಾರ್ಥಿಗಳು ಯಶಸ್ವಿಯಾಗಬೇಕು ಹಾಗೂ ಅವರು ನೀಡಿದ ಸಮಾನತೆಯ ತತ್ವಗಳು ಇಂದು ಎಲ್ಲಾ ಜನಾಂಗದವರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿದೆ. ಅವರನ್ನು ಎಲ್ಲರೂ ಅರಿತುಕೊಳ್ಳುವ ಒಂದು ಸುಕಾರ್ಯವೇ ಈ ಅಂಬೇಡ್ಕರ್ ಓದು ಕಾರ್ಯಕ್ರಮವಾಗಿದೆ ಎಂದು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಓದು ಕಾರ್ಯಕ್ರಮ ಕುರಿತು ಡಾ.ಯು.ಶ್ರೀನಿವಾಸ್ ಮೂರ್ತಿ ಅವರು ವಿಶೇಷ ಉಪನ್ಯಾಸ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೆ.ಹನುಮೇಶ, ಸೋಮಶೇಖರ್, ಶ್ಯಾಮಣ್ಣ.ಎಸ್, ಚಾಂದ್ ಪಾಷಾ ಸೇರಿದಂತೆ ಕಾಲೇಜಿನ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿಗೆ ಸದಸ್ಯರಾಗಲು ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಸೆಕ್ಷನ್ 24 ರನ್ವಯ ಜಿಲ್ಲಾ ಮತ್ತು ಉಪವಿಭಾಗ ಮಟ್ಟದಲ್ಲಿ 03 ತಿಂಗಳಿಗೊಮ್ಮೆ ನಡೆಯುವ ಸಭೆಗಳಿಗೆ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಲ್ಲಿ ಇಬ್ಬರು ಮಹಿಳೆಯರು ಮತ್ತು ಒಬ್ಬ ಪುರುಷರನ್ನು ಶಾಶ್ವತ ಆಹ್ವಾನಿತರೆಂದು ನಾಮ ನಿರ್ದೇಶನ ಮಾಡಲು ಆದೇಶಿಸಿದ್ದು, ಅದರಂತೆ ಜಿಲ್ಲಾ ಮಟ್ಟದ ಸಮಿತಿಗೆ ನಾಮ ನಿರ್ದೇಶನ ಮಾಡಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿಗೆ ಸದಸ್ಯರಾಗಲು ಆಸಕ್ತಿಯುಳ್ಳವರು ಡಿ.16ರೊಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.08392-267932 ಗೆ ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸತೀಶ್ ತಿಳಿಸಿದ್ದಾರೆ.

# ವಿವಿಧ ಹುದ್ದೆಗಳ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಆಹ್ವಾನ

**■ ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆ ಮತ್ತು ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಯಡಿಯಲ್ಲಿ ವಿಜಯನಗರ ಜಿಲ್ಲೆಯ ವಿವಿಧ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಆಹ್ವಾನಿಸಲಾಗಿದೆ.

ಎನ್.ಆರ್.ಸಿ ವೈದ್ಯಾಧಿಕಾರಿಗಳು, ಶುಶ್ರೂಷಕರು (ಎನ್.ಆರ್.ಸಿ), ಡಯಟ್ ಕೌನ್ಸಿಲರ್ (ಎನ್.ಆರ್.ಸಿ), ಆಡಿಯೋಲಾಜಿಸ್ಟ್ (ಎನ್.ಪಿ.ಪಿ.ಸಿ.ಡಿ), ಡೆಂಟಲ್ ಸರ್ಜನ್, ಡೆಂಟಲ್ ಹೈಜಿಸ್ಟ್, ಡೆಂಟಲ್ ಟೆಕ್ನಿಷಿಯನ್ ಮತ್ತು ಕಿರಿಯ ಮಹಿಳಾ ಆರೋಗ್ಯ ಸಹಾಯಕಿ (ಪಿ.ಹೆಚ್.ಸಿ.ಓ), ಯು.ಪಿ.ಹೆಚ್.ಸಿ ವೈದ್ಯಾಧಿಕಾರಿಗಳ ಹುದ್ದೆಗಳ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಜಿಲ್ಲಾ ಆರ್.ಸಿ.ಹೆಚ್ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಯಾವುದಾದರು ಆಕ್ಷಪಣೆಗಳಿದ್ದಲ್ಲಿ ಅರ್ಜಿಸಲ್ಲಿಸಿದ ಅಭ್ಯರ್ಥಿಗಳು ಡಿ.13ರ ಸಂಜೆ 5:30ರ ಒಳಗಾಗಿ ಕಚೇರಿಂ ಸಮಯದಲ್ಲಿ ಲಿಖಿತ ರೂಪದಲ್ಲಿ ಆಕ್ಷಪಣೆ ಸಲ್ಲಿಸಬಹುದಾಗಿದೆ ಎಂದುಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸಂಘದ ಉಪಾಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

# ಸೌಲಭ್ಯಕ್ಕಾಗಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ

**■ ಹಂಪಿ ಟೈಮ್ಸ್ ಹೊಸಪೇಟೆ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2023-24ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ಹಾಗೂ ಪ್ರವರ್ಗ-1ರ ಅಲೇಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ವಿವಿಧ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಪ್ರಸಕ್ತ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿ, ವಿದ್ಯಾಸಿರಿ - ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಲು 2024ರ ಜನವರಿ 10 ಕೊನೆಯ ದಿನವಾಗಿದ್ದು, ಆಸಕ್ತರು ವೆಬ್‌ಸೈಟ್ https://ssp.postmatric.karnataka.gov.in ನಲ್ಲಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಇಲಾಖಾ ಸಹಾಯವಾಣಿಸಂಖ್ಯೆ 8050770005, ಇ-ಮೇಲ್ bcwdhelpline@gmail.com ಗೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ

# ಮೇಘಾಲಯ ಬಾಲ್ಯ ಶಿಕ್ಷಣಕ್ಕೆ ಪ್ರೇರಣೆ ವಿಜಯನಗರ ಅಂಗನವಾಡಿ ಶಿಕ್ಷಣ



**■ ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿದ ಮೇಘಾಲಯದ ವಿವಿಧ ಇಲಾಖೆಗಳ ತಂಡಕ್ಕೆ ತಮ್ಮ ರಾಜ್ಯದಲ್ಲಿ ಮಕ್ಕಳ ಬಾಲ್ಯಾರಂಭಿಕ ಶಿಕ್ಷಣ, ಕಲಿಕಾವಸ್ಥೆ ಜಾರಿಗಾಗಿ ವಿಜಯನಗರ ಜಿಲ್ಲೆಯ ಅಂಗನವಾಡಿ ಕೇಂದ್ರಗಳು ಪ್ರೇರಣೆಯಾಗಿದೆ. ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಬುನಾದಿ ಶಿಕ್ಷಣವು ತುಂಬಾ ಮಹತ್ವವಾದದ್ದು, ಈ ನಿಟ್ಟಿನಲ್ಲಿ ದೇಶದ ವಿವಿಧ ರಾಜ್ಯಗಳಲ್ಲಿಯೇ ವಿಜಯನಗರ ಜಿಲ್ಲೆ ಹೆಸರಾಗಿದೆ ಎಂದು ಮೇಘಾಲಯದ ಅಧಿಕಾರಿಗಳ ತಂಡ ಅಭಿಪ್ರಾಯ ವ್ಯಕ್ತಪಡಿಸಿತು.

ಜಿಲ್ಲೆಯ 5 ಯೋಜನೆಗಳಲ್ಲಿ 1590 ಅಂಗನವಾಡಿ ಕೇಂದ್ರಗಳಿಗೆ ಬರುವ 3 ರಿಂದ 6 ವರ್ಷದ ಮಕ್ಕಳ ಕಲಿಕೆಯು ಸಮೃದ್ಧವಾಗಿಸುವ ಹಾಗೂ ಗುಣಾತ್ಮಕ ಬಾಲ್ಯಾರಂಭಿಕ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಶಾಲಾಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಮಕ್ಕಳನ್ನು ಕ್ರಿಯಾಶೀಲರನ್ನಾಗಿಸುವ ಕ್ರಿಯಾತ್ಮಕ ಚಟುವಟಿಕೆಗಳ



ಮೂಲಕ ಮಕ್ಕಳ ಕಲಿಕೆಯ ಗುಣಮಟ್ಟ ಸುಧಾರಿಸುವಲ್ಲಿ ಪ್ರಯತ್ನಿಸುತ್ತಿದೆ ಎಂದು ಇಲ್ಲಿನ ಅಧಿಕಾರಿಗಳು ವಿವರಿಸಿದರು.

ವಿಜಯನಗರ ಜಿಲ್ಲೆಯ ಅಂಗನವಾಡಿಗಳಲ್ಲಿ ನಡೆಯುತ್ತಿರುವ ಶಾಲಾಪೂರ್ವ ಶಿಕ್ಷಣವನ್ನು ಅಧ್ಯಾಯಿಸಲು ಕಳೆದ 8 ತಿಂಗಳಲ್ಲಿ, ಛತ್ತಿಸಗಡ, ಆಂಧ್ರಪ್ರದೇಶ, ಮಧ್ಯಪ್ರದೇಶ, ಉತ್ತರಪ್ರದೇಶ, ರಾಜಸ್ತಾನ ರಾಜ್ಯಗಳಲ್ಲದೆ ಹಲವು ರಾಜ್ಯಗಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು, ನೀತಿ ಆಯೋಗದ ಅಧಿಕಾರಿಗಳು ಹಾಗೂ ಶಾಲಾಪೂರ್ವ ಶಿಕ್ಷಣ ಮತ್ತು ಶಾಲಾ ಶಿಕ್ಷಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಲವಾರು ಸಂಘ ಸಂಸ್ಥೆಗಳು ಶಿಕ್ಷಣ ಆಸಕ್ತರು ಭೇಟಿ ನೀಡಿ ಶಾಲಾಪೂರ್ವ ಶಿಕ್ಷಣವನ್ನು ಅಧ್ಯಾಯನ ಮಾಡಿದ್ದಾರೆ.

ತಾಲೂಕಿನ ಶಿಶು ಅಭಿವೃದ್ಧಿ ಯೋಜನೆಯ ಗಾಧಿಗನೂರು ವಲಯದ ಗಾಧಿಗನೂರು 4ನೇ ಅಂಗನವಾಡಿ ಕೇಂದ್ರಕ್ಕೆ ಹಾಗೂ ಬೈಲವದ್ದೀಗೇರಿ 3ನೇ ಅಂಗನವಾಡಿ ಕೇಂದ್ರಗಳಿಗೆ ಮೇಘಾಲಯ ರಾಜ್ಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ವರ್ಗವು ಭೇಟಿನೀಡಿ ಅಂಗನವಾಡಿಯ ಕಲಿಕಾ ಕೊಠಡಿಯ ಆಯೋಜನೆ, ಮಕ್ಕಳ ಕಲಿಕಾ ಪೂರಕ ಸಾಮಗ್ರಿಗಳನ್ನು ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯವರು ಮಕ್ಕಳಿಗೆ ಕೈಗೊಳ್ಳುವ ಚಟುವಟಿಕೆಗಳನ್ನು ಅವಲೋಕಿಸಿ ವರದಿ ಸಂಗ್ರಹಿಸಿದರು.

ಈ ವೇಳೆ ಅಂಗನವಾಡಿ ಕೇಂದ್ರವನ್ನು ನೋಡಿ ಸಂತೋಷ ವ್ಯಕ್ತಪಡಿಸಿದ ಅವರು, ತಮ್ಮ ರಾಜ್ಯದಲ್ಲಿ ಈ ರೀತಿಯಾದ ಮಕ್ಕಳಿಗೆ ಕಲಿಕಾವ್ಯವಸ್ಥೆ ಇಲ್ಲ. >>4




## ವಚನ ಅರಿವು

### ಒಂದು ಬಿಡು, ಒಂದ ಹಿಡಿ

**ಸಾರ, ಸಜ್ಜನರ ಸಂಗ ಲೇಸು ಕಂಡಯ್ಯಾ,**
**ದೂರ: ದುರ್ಜನರ ಸಂಗವದು ಭಂಗವಯ್ಯಾ.**
**ಸಂಗವೆರಡುಂಟು: ಒಂದ ಬಿಡು, ಒಂದ ಹಿಡಿ**
**ಮಂಗಳಮೂರ್ತಿ ನಮ್ಮ ಕೂಡಲಸಂಗನ ಶರಣರ.**
**– ಬಸವಣ್ಣ**

ಮನುಷ್ಯ ಸಂಘಜೀವಿ. ತನ್ನ ಸುತ್ತಮುತ್ತಲಿನ ಜನರ ಜೊತೆ ಸ್ನೇಹ ಮಾಡುವುದು ಸಹಜ. ಹೀಗೆ ಸ್ನೇಹ ಮಾಡಬೇಕಾದರೆ ತಿಳುವಳಿಕೆಯುಳ್ಳ, ಒಳ್ಳೆಯ ಗುಣವುಳ್ಳ ಜನರ ಜೊತೆಗೆ ಸೇರಬೇಕು ಹಾಗಾದಲ್ಲಿ ತನಗೆ ತಿಳುವಳಿಕೆ ಬರುತ್ತದೆ. ಅದನ್ನು ಬಿಟ್ಟು ಸಮಾಜಕ್ಕೆ ಕೇಡನ್ನು ಬಯಸುವ ಕೆಟ್ಟವರ ಸಹವಾಸವನ್ನು ಮಾಡಿದರೆ ತನಗೂ ತೊಂದರೆ ಮತ್ತು ಸಮಾಜದಲ್ಲೂ ಮಾನ್ಯತೆ ದೊರೆಯುವುದಿಲ್ಲ. ಹಾಗಾಗಿ ಒಳ್ಳೆಯ ವ್ಯಕ್ತಿತ್ವವುಳ್ಳವರ ಸಂಘ, ಶರಣರ ಅರಿವುಳ್ಳವರ ಸಂಘ ಮಾಡಬೇಕು ಎನ್ನುತ್ತಾರೆ ಬಸವಣ್ಣ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## 2030 ರೊಳಗೆ ಅಪೌಷ್ಠಿಕತೆ ಗಣನೀಯ ಪ್ರಮಾಣದಲ್ಲಿ ನಿಯಂತ್ರಣ-ಸಚಿವ ದಿನೇಶ್ ಗುಂಡೂರಾವ್

**ಹಂಪಿ ಟೈಮ್ಸ್ ಬೆಳಗಾವಿ**

ಮಹಿಳೆಯರು ಮತ್ತು ಮಕ್ಕಳಲ್ಲಿರುವ ರಕ್ತಹೀನತೆ(ಅನೀಮಿಯಾ)ವನ್ನು 2030 ರೊಳಗೆ ಸಂಪೂರ್ಣವಾಗಿ ನಿವಾರಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವಿಧಾನಪರಿಷತ್ತಿನ ಶೂನ್ಯ ವೇಳೆಯಲ್ಲಿ ಸದಸ್ಯ ನಾಗರಾಜ್ ಅವರು ವಿಷಯ ಪ್ರಸ್ತಾಪಿಸಿ, ರಕ್ತಹೀನತೆ ಮತ್ತು ಅಪೌಷ್ಠಿಕತೆಯಿಂದ ಮಹಿಳೆಯರು ಮತ್ತು ಮಕ್ಕಳು ಬಳಲುತ್ತಿರುವ ಸಮಸ್ಯೆಗಳ ಕುರಿತು ಪ್ರಸ್ತಾಪಿಸಿದ ವಿಷಯಕ್ಕೆ ಪ್ರತಿಕ್ರಿಯಿಸಿದ ಸಚಿವರು, ರಾಜ್ಯದಲ್ಲಿ ಅನೀಮಿಯಾದಿಂದ ಬಳಲುತ್ತಿರುವ ಮಹಿಳೆಯರು ಮತ್ತು ಹದಿಹರೆಯದವರ ಸಂಖ್ಯೆ ಸುಮಾರು 2 ಕೋಟಿ ಎಂದು ಗುರುತಿಸಲಾಗಿದೆ, ಇದರ ನಿವಾರಣೆಗೆ 185 ಕೋಟಿ ರೂ ವೆಚ್ಚದಲ್ಲಿ ಕಾರ್ಯಕ್ರಮ ರೂಪಿಸಲಾಗುತ್ತಿದ್ದು, 2030 ರ ವೇಳೆಗೆ ರಜ್ಯದಲ್ಲಿ ಈ ಪ್ರಮಾಣದಲ್ಲಿ ಗಣನೀಯವಾಗಿ ಕಡಿಮೆಗೊಳಿಸುವ ಗುರಿ ಹೊಂದಲಾಗಿದೆ ಎಂದರು.

ರಾಜ್ಯದಲ್ಲಿ ಇತ್ತೀಚೆಗೆ ಬೆಳಕಿಗೆ ಬಂದ ಭ್ರೂಣ ಹತ್ಯೆ ಕುರಿತಂತೆ ಸದಸ್ಯ ಯು.ಬಿ.ವೆಂಕಟೇಶ್ ಪ್ರಸ್ತಾಪಿಸಿದರು. ಈ ಪ್ರಕರಣವನ್ನು ಈಗಾಗಲೇ ಸಿಓಡಿ ತನಿಖೆಗೆ ಆದೇಶಿಸಿದ್ದು, ಇದರಲ್ಲಿ ಭಾಗಿಯಾದ ಎಲ್ಲರ ವಿರುದ್ಧ ಅತ್ಯಂತ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.



## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com

**ಮನೆಯನ್ನು ಬೆಳಗಲು ಬಂದ ಹೆಣ್ಣನ್ನು ನಡೆಸಿಕೊಳ್ಳುವ ಪುರುಷನ ಅಹಂಕಾರಕ್ಕೇನುಕಮ್ಮಿ ಇಲ್ಲ ತನ್ನ ತಾಯಿ ಕಣ್ಣು ಕಾಣದ ಕುರುಡಿ ಆದರೂ, ಸಲುಹುತ್ತಿರುವ ಹೆಂಡತಿಯನ್ನು ಹಿಂಸಿಸುವ ಅವನ ಪುರುಷಹಂಕಾರಕ್ಕೆ ಕೊನೆ ಎಂದು. ಹೆಣ್ಣುಯಾವತ್ತೂ ತಾಯಿ ಎನ್ನುವ ಮಾತಿನ ಹಿಂದಿನ ನಿಹಿತಾರ್ಥವಾದರು ಏನು**

# ಇಳಿವಯಸ್ಸಿನಲ್ಲೂ ಇಳಿಯದ ದರ್ಪ !

ಮೊನ್ನೆ ಹುಣ್ಣಿಮೆ ಪ್ರಯುಕ್ತ ನನ್ನ ಊರಿಗೆ ಬಸ್ಸಿನಲ್ಲಿ ಹೊರಟಿದ್ದೆ(ಯಾವಾಗಲೂ ಬಸ್ಸಿನಲ್ಲೆ ಹೊಗುವುದು ಮತ್ತು ಬರುವುದು ಕೂಡ) ನಿರ್ವಾಕನ ಪಕ್ಕದ ಸೀಟಿನಲ್ಲಿ ವಯೋವೃದ್ಧೆಯೊಬ್ಬರು ಕೂತಿದ್ದರು. ನಿರ್ವಾಹಕರು ಅದುವರೆಗೂ ಟಿಕಟ್ ಕೊಡುವುದರಲ್ಲಿಯೇ ಇದ್ದರು. ಅವರು ಅ ಕೆಲಸ ಮುಗಿಸಿ ತಮ್ಮ ಸೀಟಿಗೆ ಬಂದು ಕೂತರು, ಅಷ್ಟರಲ್ಲೇ ಬಸ್ ಒಂದು ಹಳ್ಳಿಗೆ ಬಂದದ್ದರಿಂದ ನಿರ್ವಾಹಕ ನಿಲ್ಲುವ ಸೂಚನೆಗಾಗಿ ಪೀಪಿ ಊದಿದರು. ಪಕ್ಕದಲ್ಲೇ ಕೂತ ಅಕೆ, ಅಕೆ ಅನ್ನುವುದಕ್ಕಿಂತ ಅದೊಂದು ಎಲುವಿನ ಚಿಕ್ಕ ರಾಶಿ ಎನ್ನಬಹುದಾದ ಆಕೆ ,ವಿಷಿಲ್ ಶಬ್ಧ ಕಿವಿಗೆ ಬೀಳುತ್ತಲೇ "ಏಯ್ ಯಾವಾತಪ್ಪ ನೀನು ಕಿವಿ ಮರ್ರ್ ಅಂತವು ಏನ್ ಊದ್ತಿ" ಅಂದರು. ಪಕ್ಕದಲ್ಲೇ ನಿಂತಿದ್ದ ಐವತ್ತರ ಆಸು ಪಾಸಿನ ಪ್ರಾಯದ ಮಹಿಳೆಯೊಬ್ಬರು "ಸುಮ್ ಕುತ್ಕಾ ಅವ್ರು ಕಂಡಾಟ್ರು ಪೀಪಿ ಊದ್ತಾರೆ. ನಿನಗೆ ಇದೆಲ್ಲಾ ಗೊತ್ತಾಗಲ್ಲ" ಅಂದ್ರು. ಪಕ್ಕದಲ್ಲೇ ನಿಂತಿದ್ದ ನಾನು 'ಇರ್ಲಿ ಬಿಡಿಮ್ಮ ಅವ್ರಿಗೆ ವಯಸ್ಸಾಗಿದೆ ಗೊತ್ತಾಗಲ್ಲ' ಅಂದೆ. ಅಷ್ಟರೊಳಗೆ ಆ ವೃದ್ಧೆಯ ಸೆರಗಿನ ಅಂಚು ನಿರ್ವಾಹಕನ ಕೆಳಗೆ ಸಿಲುಕಿತ್ತು, "ಅಯ್ಯಾ... ಎದ್ದಳಪಾ ನೀನೇನು ನನ್ ಸೀರೆ ಮ್ಯಾಲೆ ಕುಂತ್ಕಂಡಿಯಾ"' ಅಂತ ಅವರ ಮೇಲೆ ಜೋರು ಮಾಡಲು ಶುರು ಮಾಡಿದರು. ಮತ್ತೆ ಆ ಮಹಿಳೆ ಆ ವೃದ್ಧೆಯನ್ನು ಬೈಯ್ಯಲು ಶುರು ಮಾಡಿದರು ಮತ್ತು, ನನ್ನ ಮಾತಿಗೆ ಪ್ರತಿಕ್ರಿಯೆಯಾಗಿ ಇಲ್ಲ ಬುಡ್ರಿ ಇವ್ರು ಹಿಂಗೆ ಯಾವಾಗಲು, ಇವತ್ತಿಂದಲ್ಲ ಇದು. ನಾನು ಸೋ ಅಂತ ನೆಡೆಯಾಕ್ ಬಂದಾಗಿನಿಂದ ಈ ಯವ್ವನ ಜೋರು ಹಿಂಗೆ ಐತಿ ನೋಡ್ರಿ. ಅಂದ್ರು. ಇವರು ನಿಮ್ಮವರ ಅಂದೆ ಹೌದ್ರಿ ನಮ್ಮತ್ತೆ ಈ ಯವ್ವ . ಮುವ್ವತ್ತು ವರ್ಷ ಆತು ನಾನು ಗಂಡು ಮೊಮ್ಮಕ್ಕಳನ್ನು ಕಂಡೆ ಆದ್ರೂ ಈ ಯವ್ವನ ಜೋರು ಒಂದೀಟು ಕಮ್ಮಿ ಆಗಿಲ್ಲ ನೊಡ್ರಿ. ಇಬ್ರ ಗಂಡಸು ಮಕ್ಕಳನ್ನ ಹಡದೀನಿ. ಜ್ವಾಪಾನ ಮಾಡಿ ಮದುವಿ ಮಾಡಿ ಸೊಸ್ರು ಬಂದ್ರು. ಮೊಮ್ಮಕ್ಕು ಬಂದ್ರು. ನಾನು ಮುದುಕಿ ಆಗಿನಿ. ಆದರೂ, ಇನ್ನು ನನ್ನ ಉರುಸೊದನ್ನು ಬಿಟ್ಟಿಲ್ಲ ಈ ಯವ್ವ.

ಅಷ್ಟೊತ್ತಿಗೆ ಪಕ್ಕದ ಸೀಟಿನಲ್ಲಿ ಕೂತಿದ್ದ ಇನ್ನೊಬ್ಬ ಮಹಿಳೆ ಮಧ್ಯೆದಲ್ಲಿ ಮಾತು ಅರಂಭಿಸಿದರು. 'ಹೌದೇನವ್ವ ಘನವಾದ ಮುದುಕಿ ಐತಿ ಬಿಡು ಇದು ಅಂದ್ರು' ಹೂನೆವ್ವ ಇನ್ನು ಈ ಮತಾಯಿಗೆ ಕಣ್ಣು ಕಾಣ್ಸಲ್ಲ ಅಂತ ಈಟೈತಿ. ಕಣ್ ಕಂಡಿದ್ರೆ ಇನ್ನೇಟ್ ಹುರಿದು ಮುಕ್ತಿತ್ತೋ ಇದು ಅಂದ್ರು.

ಆ ಮಹಿಳೆ ಹೇಳಿದ ಪ್ರಕಾರ ಆಕೆ ಯಾವುದೋ ಊರಿಗೆ ಹೋಗಿ ಬರುವಾಗ ಬಸ್ಸಿನಲ್ಲಿಯೇ ಬಿದ್ದು ತಲೆಗೆ ಏಟು (ಗಾಯ) ಮಾಡಿಕೊಂಡಿದ್ದರಂತೆ,



ಯಾರೋ ಗಾಯಕ್ಕೆ ಸೀಮೆ ಎಣ್ಣೆ ಹಾಕಿಕೊಳ್ಳಲು ಹೇಳಿದರಂತೆ, ಗಾಯದ ತೀವ್ರತೆಗೆ ಕಣ್ಣು ನೋಯುತ್ತಿರುವುದರಿಂದ ಗಾಯದ ಬದಲಿಗೆ ಕಣ್ಣಿಗೆ ಸೀಮೆ ಎಣ್ಣೆ ಹಾಕಿಕೊಂಡರಂತೆ ಆಗಿನಿಂದ ಕಣ್ಣು ಕಾಣುತ್ತಿಲ್ಲವಂತೆ. ಆಕೆಗೆ ಬಸ್ಸಲ್ಲಿ ತಿರುಗಾಡುವುದು ಮೊದಲಿನಿಂದ ಇರುವ ಕಯಾಲಿ ಅಂತ ಆ ಮಹಿಳೆ ಹೇಳಿದರು. ಅದು ಕಣ್ಣಿದ್ದಾಗಿನ ಮಾತು ಮಾತ್ರವಲ್ಲ. ಈ ಹೊತ್ತಿಗೂ ಆಕೆಯನ್ನು ಇವರು ಕೈ ಹಿಡಿದು ತಾವು ಹೋದಲ್ಲೆಲ್ಲಾ ಕರೆದುಕೊಂಡು ಹೋಗಬೇಕಂತೆ. ಆಕಸ್ಮಿಕವಾಗಿ ಮನೆಯಲ್ಲಿಯೇ ಬಿಟ್ಟು ಹೊರಟರೆ ಕೈ ಆಡಿಸಿ ಮನೆಯಲ್ಲಿ–ಮೇಲಿರಿಸಿದ ಸಾಮಾನುಗಳನ್ನು, ಪಾತ್ರೆ ಪದಾರ್ಥಗಳನ್ನು ಕೆಳಕ್ಕೆ ಬೀಳಿಸಿಬಿಡುತ್ತಾರಂತೆ. ಇದು ಮುವತ್ತು ವರ್ಷದಿಂದಲೂ ನಡೆದೇ ಇದೆ.

ಅತ್ತೆಯದ್ದು ಇಷ್ಟಾದರೆ ಇನ್ನು ಗಂಡ ಎಂದೂ ಅಕೆಯನ್ನು ಚಂದ ನಡೆಸಿಕೊಂಡವನಲ್ಲವಂತೆ. ಕೂಲಿ ನಾಲಿ ಮಾಡಿ ಮಕ್ಳನ್ನು ಜೋಪಾನ ಮಾಡ್ಕೊಂಡೀನಿ. ಅವನ ಹೊಡತ ಸಾಕಾಗಿದೆ. ಮಕ್ಳು ದೊಡ್ಡವರಾಗಿ, ಸೊಸ್ತರು ಬಂದು ಮೊಮ್ಮಕ್ಕಳನ್ನು ಕಂಡರೂ ಗಂಡನ ಕಿರುಕುಳ ತಪ್ಪಲಿಲ್ಲ ಅಂತ ಅಲವತ್ತುಕೊಳ್ಳುತ್ತಾಳೆ ಆ ನಡು ವಯಸ್ಸಿನ ಮಹಿಳೆ.

ಈಗ ಒಂದು ವಿಷ್ಯ ಕಾಡೋದೆನಂದ್ರೆ ಅತ್ತೆ ಅದವಳು ಸದಾ ಆಕೆಯ ದರ್ಪ ಬಿಡುವುದೇ ಇಲ್ವಾ ಎನ್ನುವುದು. ಎಲ್ಲಾ ಸರಿ ಇದ್ದಾಗ ಇದು ಹೌದು ಎನ್ನಬಹುದಾದರೂ ಒಂದು ಹಂತದವರೆಗೂ ಸರಿ. ಅದರೆ ಕಣ್ಣು ಕಾಣದ ಅತ್ತೆಯೂ ತನ್ನ ಅಂತಿಮ ಅಂದರೆ ಎಂಬತ್ತು ತೊಂಬತ್ತರ ಹರೆಯದಲ್ಲೂ ಅದೇ ದರ್ಪ ತೋರುವುದು ನಿಜಕ್ಕು ಅಚ್ಚರಿ ಮೂಡಿಸುತ್ತೆ. "ಹೆಣ್ಣೆ ಹೆಣ್ಣೆ ಶತ್ರು" ಎನ್ನುವುದು ಎಲ್ಲಾ ಕಾಲಕ್ಕೂ ಸಲ್ಲದು ಎಂದುಕೊಳ್ಳುವ ಈ ಸಮಯದಲ್ಲೂ ಇಂಥಹ ಸುಡು ಸುಡು ಉದಾಹರಣೆಗಳು ಕಣ್ಣಿಗೆ ಕಟ್ಟುತ್ತವೆ. ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ. ಎನ್ನುವುದು ಇಲ್ಲಿ ಸುಳ್ಳಾಗಿದೆ. ಕೇವಲ ಅತ್ತೆಯ ಕಾಲವೆ. ಈ ಕಾಲಕ್ಕೂ ಇಂಥಹ ಅತ್ತೆಯರನ್ನು ಮಗುವಿನಂತೆ ಎತ್ತಿ ಜೋಪಾನ ಕಾಡುವ ಸೊಸೆಯಂದಿರು ಇದ್ದಾರೆ ಎಂದರೆ "ಮಾನವಿಯತೆ ಇನ್ನು ಉಸಿರಾಡುತ್ತಿದೆ" ಎಂದು ಯೋಚಿಸಿತ್ತಿರುವಾಗಲೇ ಆ ಅತ್ತೆ ಸೊಸೆ ಇಳಿಯಬೇಕಾದ ನಿಲುಗಡೆ ಬಂದಾಯ್ತು. ಕೈ ಹಿಡಿದು ಸೊಸೆ ಇಳಿಸಿಕೊಳ್ಳಲು ಹೋದರೆ ಹಿಂದಿರುವವರ ಮೈ ಮೇಲಿನ ಬಟ್ಟೆಯನ್ನು ಬಿಗಿಯಾಗಿ ಹಿಡಿದುಕೊಂಡಿದ್ದರು – ಬಗಲ ಕೂಸು ಬೀಳುವ ಭಯಕ್ಕೆ ತನ್ನವರನ್ನು ಬಿಗಿಯಾಗಿ ಹಿಡಿದುಕೊಂಡಂತೆ ಹಿಡಿದಿದ್ದ. ಹಿಡಿತವನ್ನು ಬಿಡಿಸಿ ಸೊಸೆ ಮಗುವಂತೆ ಎತ್ತಿ ಕೆಳಕ್ಕೆ ಇಳಿಸಿಕೊಡರು.

ತನ್ನ ಮನೆಯನ್ನು ಬೆಳಗಲು ಬಂದ ಹೆಣ್ಣನ್ನು ನಡೆಸಿಕೊಳ್ಳುವ ಪುರುಷನ ಅಹಂಕಾರಕ್ಕೇನುಕಮ್ಮಿ ಇಲ್ಲ ತನ್ನ ತಾಯಿ ಕಣ್ಣು ಕಾಣದ ಕುರುಡಿ ಆದರೂ, ಸಲುಹುತ್ತಿರುವ ಹೆಂಡತಿಯನ್ನು ಹಿಂಸಿಸುವ ಅವನ ಪುರುಷಹಂಕಾರಕ್ಕೆ ಕೊನೆ ಎಂದು. ಹೆಣ್ಣುಯಾವತ್ತೂ ತಾಯಿ ಎನ್ನುವ ಮಾತಿನ ಹಿಂದಿನ ನಿಹಿತಾರ್ಥವಾದರು ಏನು

ತನ್ನ ದೈಹಿಕ ಬಲಹೀನತೆಯ ನಡುವೆಯೂ ಮೆದುವಾಗದವರು ಅದು ಗಂಡು, ಹೆಣ್ಣು ಯಾರಾದರೂ ಸರಿಯೇ ಮನುಷ್ಯರೇ ಅಲ್ಲ. ಎನ್ನುವುದು ಯಾವತ್ತಿಗೂ ಸರಿ

**– ಭಾರತಿ ಅಶೋಕ್**
**ಹೊಸಪೇಟೆ**

# ಹೊಸ ಬಾಳಿಗೆ ಕಾಲಿಟ್ಟ ಕ್ಷಮಾ....

ಸಮುದ್ರದ ದಡದಲ್ಲಿ ನಿಂತ ಆಕೆ ಸೂರ್ಯಾಸ್ತವನ್ನು ನೋಡುತ್ತಿದ್ದಳು. ತಣ್ಣನೆಯ ಕುಳಿರ್ಗಾಳಿಗೆ ಆಕೆಯ ಮುಂಗುರುಳು ಹಾರಾಡುತ್ತಿತ್ತು. ಸ್ವಲ್ಪ ದೂರದಲ್ಲಿ ಹಾದು ಹೋಗುತ್ತಿದ್ದ ದಂಪತಿಗಳು ಈಕೆಯನ್ನು ನಿಟ್ಟಿಸಿ ನೋಡಿ ನೀನು ಕ್ಷಮಾ ಅಲ್ಲವಾ?? ಎಂದು ಕೇಳಿದರು. ಕೂಡಲೇ ಆಕೆ ಅಲ್ಲ ನಾನು ನವ್ಯ ಎಂದು ಹೇಳಿದಳು. ಆ ದಂಪತಿಗಳು ಓ ಹೌದೇ ನಮ್ಮ ಊರಿನಲ್ಲಿ ನಮ್ಮ ಪರಿಚಯದ ಕ್ಷಮಾ ಎಂಬ ಹುಡುಗಿ ಇದ್ದಳು. ನಿನಗೆ ಆಕೆಯದೆ ಹೋಲಿಕೆ ಆದ್ದರಿಂದ ಕೇಳಿದೆ, ತಪ್ಪು ತಿಳಿಯಬೇಡಮ್ಮ ಎಂದು ಆ ದಂಪತಿಗಳು ಹೇಳಿದರು. ಪರ್ವಾಗಿಲ್ಲ ಬಿಡಿ ಎಂದು ಹೇಳುತ್ತಾ ನವ್ಯ ಮುನ್ನಡೆದಳು. ಹಿಂದಿನಿಂದ ಆ ದಂಪತಿಗಳು ಎಷ್ಟೊಂದು ವಿಚಿತ್ರ ಅಲ್ಲವಾ!! ಇಷ್ಟೊಂದು ಹೋಲಿಕೆಯನ್ನು ಎಲ್ಲೂ ನೋಡಿರಲಿಲ್ಲ ಎಂದು ತಮ್ಮ ತಮ್ಮಲ್ಲೇ ಮಾತನಾಡುವುದನ್ನು ಕೇಳಿದ ನವ್ಯಳ ಮನಸ್ಸು ನಾಲ್ಕು ವರ್ಷ ಹಿಂದೆ ಓಡಿತು.

ಹುಟ್ಟಿದ್ದು ಕಡುಬಡತನದ ಮನೆಯಲ್ಲಿ, ಚಿಕ್ಕಂದಿನಲ್ಲೇ ತಂದೆ ತಾಯಿಯರನ್ನು ಕಳೆದುಕೊಂಡು ಸೋದರ ಮಾವನ ಆಶ್ರಯದಲ್ಲಿ ಬೆಳೆದ ಆಕೆ ಸೌಂದರ್ಯದ ಖನಿ. ಮಾವನ ಪತ್ನಿ ಮತ್ತು ಮಕ್ಕಳ ಅಸಡ್ಡೆ, ಅನಾದರಗಳ ನಡುವೆ ಬೆಳೆದ ಆಕೆಯ ಕೈಹಿಡಿದದ್ದು ವಿದ್ಯೆಯೊಂದೇ. ಪಿಯುಸಿ ಮುಗಿದ ಕೂಡಲೇ ಆಕೆಯನ್ನು ಸೋದರ ಮಾವ ಪದವಿ ತರಗತಿಗೆ ದಾಖಲು ಮಾಡಿ ಸರ್ಕಾರದವರು ಕೊಡ ಮಾಡುವ ಹಾಸ್ಟೆಲಿನಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿ ಆಗಾಗ ಬಂದು ಭೇಟಿಯಾಗುವೆ ಎಂದು ಹೇಳಿ ಹೊರಟು ಹೋದನು. ಕಾಲೇಜಿನ ಜೊತೆ ಜೊತೆಗೆ ಪಾರ್ಟ್ ಟೈಮ್ ಕೆಲಸ ಮಾಡುತ್ತಾ ಆಕೆ ತನ್ನ ಸಣ್ಣ ಪುಟ್ಟ ಖರ್ಚುಗಳನ್ನು ನಿಭಾಯಿಸಿಕೊಳ್ಳತೊಡಗಿದಳು. ಪದವಿ ಮುಗಿದ ನಂತರ ಸಣ್ಣ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಸೇರಿಕೊಂಡು ಖಾಸಗಿಯಾಗಿ ಬಿ.ಎಡ್. ಪದವಿ ಪೂರೈಸಿಕೊಂಡಳು.

ಪ್ರತಿದಿನ ಶಾಲೆಗೆ ಹೋಗಿ ಬರುವ ಹಾದಿಯಲ್ಲಿ ಈಕೆಯನ್ನು ನೋಡುತ್ತಿದ್ದ ಓರ್ವ ಶ್ರೀಮಂತ ಯುವಕ ಈಕೆಯನ್ನು ಮೊದಲ ನೋಟದಲ್ಲಿಯೇ ಪ್ರೀತಿಸಿ ಆಕೆಯ ಪೂರ್ವಾಪರವನ್ನು ವಿಚಾರಿಸಿದನು. ಒಂದೇ ವಾರದಲ್ಲಿ ದೇವಸ್ಥಾನದ ಆವರಣದಲ್ಲಿ ಆಕೆಯನ್ನು ನಿಲ್ಲಿಸಿ ನಾನು ಅರುಣ್ ಎಂದು. ನನ್ನಪ್ಪ ಅಮ್ಮನಿಗೆ ನಾನು ನನ್ನ ತಮ್ಮ... ಇಬ್ಬರೇ





ಮಕ್ಕಳು. ನಾನು ಎಂಬಿಎ ಮಾಡಿ ನಮ್ಮದೇ ಸ್ವಂತ ಕಂಪನಿಯನ್ನು ನೋಡಿಕೊಳ್ಳುತ್ತಿದ್ದೇನೆ. ನನಗೆ ಮೊದಲ ನೋಟದಲ್ಲಿಯೇ ನಿನ್ನ ಮೇಲೆ ಪ್ರೇಮವಾಗಿದೆ. ನೀನು ಓದಿದ ಬಿ ಎಡ್ ಕಾಲೇಜಿನ ಪ್ರಿನ್ಸಿಪಾಲರ ಮಗ ನನ್ನ ಸ್ನೇಹಿತ. ಆತನಿಂದ ನಿನ್ನ ಕುರಿತು ಎಲ್ಲ ವಿವರವನ್ನು ಪಡೆದಿದ್ದೇನೆ. ನನ್ನ ಮನಸ್ಸಿನಲ್ಲಿರುವುದನ್ನು ನಿನಗೆ ಬಿಚ್ಚಿ ಹೇಳಿದ್ದೇನೆ.... ನಿನಗೆ ನನ್ನ ಈ ಪ್ರಸ್ತಾಪ ಇಷ್ಟವಿದ್ದರೆ ನಾವು ಮುಂದುವರೆಯೋಣ ಎಂದು ಸರಳವಾಗಿ ಆದರೆ ಸ್ಫುಟವಾದ ಧ್ವನಿಯಲ್ಲಿ ಹೇಳಿದನು. ಆಕೆ ತಲೆಯೆತ್ತಿ ಅವನನ್ನು ದಿಟ್ಟಿಸಿ ನೋಡಿದಳು. ಸದೃಢ ಶರೀರದ ಕಡುಗಪ್ಪುಗೂದಲಿನ ಗೋದಿ ಬಣ್ಣದ ಆ ಯುವಕ ನೋಡಲು ಲಕ್ಷಣವಾಗಿದ್ದ. ಆತನ ಹಿನ್ನೆಲೆಯ ಬಗ್ಗೆ ಆಕೆಗೆ ಏನೂ ಅರಿವಿರದಿದ್ದರೂ ಒಂದೆರಡು ದಿನಗಳಲ್ಲಿ ಯೋಚಿಸಿ ಹೇಳುವೆ ಎಂದು ಮನೆಗೆ ತೆರಳಿದಳು.

ಮರುದಿನ ಆಕೆ ಭೇಟಿ ಮಾಡಿದ್ದು ತಾನು ಖಾಸಗಿಯಾಗಿ ಓದುತ್ತಿದ್ದ ಕಾಲೇಜಿನ ಪ್ರಿನ್ಸಿಪಾಲರನ್ನು. ಈಕೆಯನ್ನು ಕಂಡ ಕೂಡಲೇ ಪ್ರಿನ್ಸಿಪಾಲರು ಆಕೆಯನ್ನು ಕರೆದು ಕುಳ್ಳಿರಿಸಿಕೊಂಡು ಆ ಹುಡುಗನ ಎಲ್ಲ ಪ್ರವರವನ್ನು ಬಿಚ್ಚಿಟ್ಟರು. ಎಲ್ಲವೂ ಸರಿಯಾಗಿದೆ ಆಕೆ ಮುಂದುವರೆಯಬಹುದು ಎಂಬುದನ್ನು ಮನದಟ್ಟು ಮಾಡಿಕೊಂಡಳು. ಎರಡು ದಿನಗಳ ನಂತರ ಮತ್ತೆ ಅದೇ ಸ್ಥಳದಲ್ಲಿ ಭೇಟಿ ಮಾಡಿದ ಅರುಣ್. ಆಕೆಯ ಮುಖ ರಾಗರಂಜಿತವಾದದ್ದನ್ನು ನೋಡಿಯೇ ಅರಿತುಕೊಂಡ. ಅರುಣನ ತಂದೆ ತಾಯಿಯರು ಅರೆ ಮನಸ್ಸಿನಿಂದಲೇ ಈ ಮದುವೆಗೆ ಒಪ್ಪಿಗೆ ಕೊಟ್ಟಿದ್ದರು. ಹೊಸದಾಗಿ ವಿವಾಹವಾದ ದಂಪತಿಗಳ ಬಾಳು ಸಂತಸದ ಕಡಲಾಗಿತ್ತು. ಹಾಗಾಗಿ ಅತ್ತೆಯ ಅಸಹನೆ ಅಷ್ಟೇನೂ ಬಾಧಿಸಲಿಲ್ಲ ಆಕೆಗೆ. ಮೊದಲ ವರ್ಷದ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲು ಜೋಡಿಗಳು ಮಲೇಶಿಯಾಗೆ ಹೋಗಿ ಬಂದರು. ಅಲ್ಲಿಂದ ಬಂದ ಮೇಲೆ ಅರುಣ್ ಆರೋಗ್ಯದಲ್ಲಿ ವ್ಯತ್ಯಾಸ ಉಂಟಾಯಿತು... ಮುಂದೆ ಅದು ಕರೋನ ಮಹಾಮಾರಿ ಎಂದು ಪತ್ತೆಯಾಗುವ ಹೊತ್ತಿಗೆ ಅರುಣ್ ಇವರೆಲ್ಲರನ್ನು ಬಿಟ್ಟು ಹೊರಟು ಹೋಗಿದ್ದ. 'ಅನಿಷ್ಟಕ್ಕೆಲ್ಲ ಶನೀಶ್ವರನೇ ಕಾರಣ' ಎಂಬಂತೆ ತಮ್ಮ ಮಗ ಸಾಯಲು ಕ್ಷಮಾಳ ಕಾಲ್ಗುಣವೇ ಕಾರಣ ಎಂಬ ಅತ್ತೆ ಮಾವರ ಹೀಯಾಳಿಕೆಯ ಜೊತೆ ಜೊತೆಗೆ ಮೈದುನನ ಕಣ್ಣುಗಳಲ್ಲಿರುವ ಲಾಲಸೆ ಆಕೆಯನ್ನು ಬೆಚ್ಚಿ ಬೀಳುವಂತೆ ಮಾಡುತ್ತಿತ್ತು. ಗಂಡ ಸತ್ತ ನಂತರ ಮನೆ ಆಕೆಯ ಪಾಲಿಗೆ ನರಕವಾಗಿತ್ತು. ಮುಂದಿನ ಕೆಲವೇ ದಿನಗಳಲ್ಲಿ ಆಕೆಯೂ ಕೂಡ ಕರೋನ ಪೀಡಿತಳಾದಳು. ಆಕೆಯನ್ನು ಆಸ್ಪತ್ರೆಗೆ ದಾಖಲಿಸಿಕೊಳ್ಳಲು ಆಸ್ಪತ್ರೆಯ ವಾಹನ ಬಂದು ನಿಂತಾಗ ಮನೆಯವರಾರೂ ಹೊರ ಬರಲಿಲ್ಲ. ಈಗಾಗಲೇ ಮಾನಸಿಕವಾಗಿ ಸಾಕಷ್ಟು ನೊಂದಿದ್ದ ಆಕೆ ಕೂಡಲೇ ತನ್ನ ಬಟ್ಟೆ ಬರೆಗಳ ಜೊತೆಗೆ ತನ್ನ ಎಲ್ಲಾ ಸರ್ಟಿಫಿಕೇಟ್ಗಳನ್ನು ಕೂಡ ಜೋಡಿಸಿಕೊಂಡಳು. ಆಕೆಯ ತಲೆಯಲ್ಲಿದ್ದು ಒಂದೇ.... ಕರೋನಾದಿಂದ ಸತ್ತರೆ ಮರಳಿ ಬರುವುದಿಲ್ಲ ನಿಜ ಆದರೆ ಬದುಕಿ ಬಂದರೆ ... ಎಲ್ಲರಿಂದ ದೂರಾಗಿ ಹೊಸ ಬದುಕನ್ನು ಕಟ್ಟಿಕೊಳ್ಳುವ ತವಕ. ಅಂತೆಯೇ ಆಸ್ಪತ್ರೆಯಲ್ಲಿ ಕ್ವಾರಂಟೈನ್ ಸಮಯವನ್ನು ಪೂರೈಸಿದ ಆಕೆ ವೈದ್ಯರ ಸಹಾಯದಿಂದ ದೂರದ ಈ ಊರಿಗೆ ಬಂದು ಸೇರಿದಳು.ದೂರದ ಈ ಹೊಸ ಊರು, ಹೊಸ ಜಾಗದಲ್ಲಿ ಆಕೆ ತನ್ನ ಅಂದಗೆಟ್ಟ ಬದುಕಿಗೆ ವಿದಾಯ ಹೇಳಿ ಸ್ಥಳೀಯ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಸೇರಿಕೊಂಡಳು. ತನ್ನದೇ ಆದ ಸುರಕ್ಷಿತ ವಲಯವನ್ನು ಸೃಷ್ಟಿಸಿಕೊಂಡು ಬದುಕನ್ನು ನಡೆಸುತ್ತಿದ್ದಾಳೆ. ಬದುಕು ಒಂದು ನಿಲುಗಡೆಗೆ ಬರುತ್ತಿದೆ. ಕೇವಲ ಒಂದೇ ವರ್ಷ ಆಕೆಯೊಂದಿಗೆ ಸಂಸಾರ ಮಾಡಿದರೂ ಅಪಾರ ಪ್ರೀತಿಯ ಹೊನಲನ್ನು ಹರಿಸಿದ ಪತಿಯ ನೆನಪಿನಲ್ಲಿ ಬದುಕನ್ನು ಸಾಗಿಸುತ್ತಿದ್ದಾಳೆ.

ಎಲ್ಲವನ್ನು ಮತ್ತೊಮ್ಮೆ ನೆನೆದ ಆಕೆ ನಿಟ್ಟುಸಿರು ಬಿಟ್ಟು ನಿಧಾನವಾಗಿ ಎದ್ದು ತನ್ನ ಹಿಂದಿನ ಬದುಕನ್ನು ತೊಡೆದಂತೆಯೇ ಸೀರೆ ಮತ್ತು ಕೈಗಳಿಗೆ ಅಂಟಿದ ಉಸುಕನ್ನು ತೊಡೆದು ಮುಂದೆ ಸಾಗಿದಳು.

**– ವೀಣಾ ಹೇಮಂತ್ ಗೌಡ ಪಾಟೀಲ್**
ಮುಂಡರಗಿ ಗದಗ

## ಕವಿ ಮನಸು

### ಕಡಲು



ನಮ್ಮ ಮನಸಾಗಲಿ ಕಡಲು
ಒಳಿತು ಕೆಡುಕುಗಳ ತುಂಬಲು
ಕಡಲಿಗೆ ಇಲ್ಲ ಭೇಧ ಭಾವ
ಇದ ತಿಳಿದು ಬದುಕು ಮಾನವ

ಕಡಲಿನೊಳಗಣ ಅಲೆಗಳಲಿ
ಏಳು ಬೀಳುಗಳು ಸಹಜ
ಜೀವನದ ಸಾಗರದಿ ಕಷ್ಟ
ಸುಖಗಳು ಸಹ ಅಷ್ಟೇ ಸಹಜ

ಕಡಲಾವರಿಸಿ ಎಲ್ಲವನು ಅಪ್ಪಿಕೊಂಡಂತೆ
ಒಳಿತು ಕೆಡುಕುಗಳ ಅಪ್ಪಿಕೊಳ್ಳೋಣ
ಕಡಲಿನಂತೆ
ಸಮರಸವು ಜೀವನವು ಸಾಗರದಂತೆ
ನಾವು ನೀವು ಈ ಮರ್ಮ ತಿಳಿಯಬೇಕಂತೆ

ಕಡಲ ತಡಿಯಲಿ ಕುಳಿತು ಕಡಲಲೆಗಳು
ಹತ್ತಿರ ಬರಬೇಡವೆಂದರೆ
ಕಡಲಲೆಗಳು ಕೇಳಿಯಾವೇ

ಜೀವನದ ಪಯಣದಲಿ
ಕಷ್ಟಗಳು ಬರಬೇಡವೆಂದರೆ
ಕಷ್ಟಗಳು ಬರದೆ ಇರುವವೇ

ಕಡಲಿನಲಿ ಅಲೆಗಳು
ಮೇಲೆಳಿ ಕೆಳಗಿಳಿಯುವಂತೆ
ಜೀವನದಿ ಕಷ್ಟ ಸುಖಗಳು
ಸಹ ಬಂದು ಹೋಗುವವಂತೆ

ಜೀವನವು ಮೂರು ದಿನದ ಸಂತೆ
ಮಾಡಬೇಕು ನಾವು ಒಳ್ಳೆಯ ಕಾರ್ಯವಂತೆ
ಮಾನವರು ನಾವು ಈ ಮರ್ಮ
ತಿಳಿಯಬೇಕಂತೆ
ಆಗಲೇ ನಮ್ಮ ಬದುಕು ಸಾರ್ಥಕವಂತೆ

**ಕೆ ಎಂ ಬಸವರಾಜ**
**ಹೊಸಪೇಟೆ**

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

### ತುಂಗಭದ್ರಾ ನೀರಿನ ಮಟ್ಟ



| ಸೋಮವಾರ : 04-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1592.49 ಅಡಿ |
| ಒಳ ಹರಿವು | 853 ಕ್ಯುಸೆಕ್ |
| ಹೊರ ಹರಿವು | 1958 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 13.238 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.13 ಅಡಿ |
| ಒಳ ಹರಿವು | 1470 ಕ್ಯುಸೆಕ್ |
| ಹೊರ ಹರಿವು | 5000 ಕ್ಯುಸೆಕ್ |
| ಸಾಮರ್ಥ್ಯ | 90.828 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಧ್ವನಿ ಇಲ್ಲದವರಿಗೆ ಧ್ವನಿಯಾಗಿದೆ ಸಂವಿಧಾನ

■ ಹಂಪಿ ಟೈಮ್ಸ್ ಹೊಸಪೇಟೆ

ಶೋಷಿತರಿಗೆ ಸಂವಿಧಾನ ಆಧಾರಸ್ತಂಭವಾಗಿದೆ. ಪ್ರಜಾಪ್ರಭುತ್ವವನ್ನು ಪ್ರತಿಪಾದಿಸುವುದೇ ಸಂವಿಧಾನದ ಮುಖ್ಯ ಆಶಯ. ಆದರೆ ಸಂವಿಧಾನವನ್ನು ಧಿಕ್ಕರಿಸುವ ಪ್ರಯತ್ನಗಳು ಆಗಾಗ ನಡೆಯುತ್ತಿದೆ. ಇದಕ್ಕೆ ಯಶಸ್ಸು ಸಿಕ್ಕರೆ ಹತ್ತು ವರ್ಷಗಳಲ್ಲಿ ಪ್ರಜಾಪ್ರಭುತ್ವವೂ ಕುಸಿದು ಹೋಗಬಹುದು ಎಂದು ಸಮಾಜಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದರು.

ಚಲವಾದಿ ಮಹಾಸಭಾ ರಾಜ್ಯ ಹಾಗೂ ಜಿಲ್ಲಾ ಘಟಕಗಳ ಆಶ್ರಯದಲ್ಲಿ ನಗರದ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರವನ್ನು ಉದ್ಘಾಟಿಸಿ ಮಾತನಾಡಿದರು. ದಲಿತ, ಹಿಂದುಳಿದ, ಅಲ್ಪಸಂಖ್ಯಾತರು, ರೈತರು, ಬಡವರು ಮತ್ತು ಮಹಿಳೆಯರಿಗೆ ಸಂವಿಧಾನದಿಂದ ಮಾತ್ರ ನ್ಯಾಯ ಸಿಗಲು ಸಾಧ್ಯ. ಸಂವಿಧಾನದ ವಿರುದ್ಧ ಮಾತನಾಡುವವರಿಗೆ ಎಚ್ಚರಿಕೆ ನೀಡುವ ಎದೆಗಾರಿಕೆ ನಮ್ಮಲ್ಲಿ ಬರಬೇಕೆಂದರೆ ನಾವು ಶಿಕ್ಷಣ ಪಡೆಯಬೇಕು. ಶಿಕ್ಷಣದಿಂದ ವಿಮುಖರಾದರೆ ದಲಿತ, ಶೋಷಿತ ಸಮುದಾಯಗಳು ಅನ್ಯಾಯ, ತುಳಿತಕ್ಕೆ ಸಿಲುಕುವ ಅಪಾಯವಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಜಗತ್ತಿನ ಶ್ರೇಷ್ಠ ಸಾಮಾಜಿಕ ಚಿಂತಕ, ತತ್ವಜ್ಞಾನಿ, ಮೇಧಾವಿಗಳಲ್ಲಿ ಒಬ್ಬರು.



ಬಸವಣ್ಣನವರಂತೆ ಭಾರತದಲ್ಲಿ ಸಮ ಸಮಾಜ ನಿರ್ಮಿಸಬೇಕು ಎಂಬುದು ಅವರ ಮಹಾನ್ ಆಶಯವಾಗಿತ್ತು. ಭಾರತದ ಪ್ರತಿಯೊಂದು ವಿಷಯವನ್ನೂ ಆಳವಾಗಿ ಚಿಂತನೆ ನಡೆಸುವ ಶಕ್ತಿ ಹೊಂದಿದ್ದ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಎಲ್ಲವೂ ಅಡಕವಾಗುವಂತೆ, ಧ್ವನಿ ಇಲ್ಲದವರಿಗೆ ಧ್ವನಿ ಬರುವಂತಹ ವ್ಯವಸ್ಥೆ ಮಾಡಿದರು. ಇದನ್ನು ನಾವು ಅರ್ಥಮಾಡಿಕೊಂಡು ಜನರನ್ನು ಮೇಲೆತ್ತಲು ಒಗ್ಗೂಡಿ ಪ್ರಯತ್ನಿಸಬೇಕು ಅಂಬೇಡ್ಕರ್ ಕನಸ ನನಸು ಮಾಡಲು ಒಗ್ಗಟ್ಟು ಪ್ರದರ್ಶಿಸಬೇಕು ಎಂದರು.

ಶಾಸಕ ಪ್ರಸಾದ್ ಅಬ್ಬಯ್ಯ ಮಾತನಾಡಿ, ಪರಿಶಿಷ್ಟ ಜಾತಿ ಸಮುದಾಯಗಳು ಒಗ್ಗೂಡಿ ಹೋರಾಡಿದರೆ ಮಾತ್ರ ಯಾವುದೇ ಸೌಲಭ್ಯ ಪಡೆಯಲು ಸಾಧ್ಯ. ಒಗ್ಗಟ್ಟನ್ನು ಹಾಳು ಮಾಡುವ ಯತ್ನದ ಬಗ್ಗೆ ಎಚ್ಚರದಿಂದ ಇರಬೇಕು. ವಿಜಯನಗರ ಜಿಲ್ಲೆಯಲ್ಲಿ ಈ ಕಾರ್ಯಕ್ರಮದ ಮೂಲಕ ಅಪರೂಪದ ಒಗ್ಗಟ್ಟು ಪ್ರದರ್ಶಿಸಲಾಗಿದೆ ಎಂದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಎನ್.ಚಿನ್ನಸ್ವಾಮಿ ಸೋಸಲೆ ಮಾತನಾಡಿ, ನಮಗೆ ಪುರಾಣಗಳೇ ಆದರ್ಶವಾದವು. ಆದರೆ, ಅಂಬೇಡ್ಕರ್ ಅವರಿಗೆ ದೇಶದ ವಾಸ್ತವ ಸ್ಥಿತಿ ಗೊತ್ತಿತ್ತು. ಅಂತಹ ವಾಸ್ತವವಾದಿ ತೋರಿಸಿಕೊಟ್ಟ ಹಾದಿಯಲ್ಲಿ ಎಲ್ಲರೂ ಸಾಗಬೇಕು ಎಂದರು.

ರಾಜ್ಯ ಛಲವಾದಿ ಮಹಾಸಭಾದ ಅಧ್ಯಕ್ಷ ಸಿದ್ದಯ್ಯ ಅಧ್ಯಕ್ಷತೆ ವಹಿಸಿದ್ದರು. ಮಹಾಸಭಾದ ಜಿಲ್ಲಾ ಅಧ್ಯಕ್ಷ ಸೋಮಶೇಖರ್ ಬಣ್ಣದಮನೆ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿರಾಜ್ ಶೇಖ್, ಪ್ರಚಾರ ಸಮಿತಿ ಅಧ್ಯಕ್ಷ ಎಚ್.ಎನ್. ಎಫ್.ಇಮಾಮ್ ನಿಯಾಜಿ, ಉದ್ಯಮಿ ಲಿಂಗೇಶ್, ಸೈಯ್ಯದ್ ಮೊಹ್ಮದ್ ಮತ್ತಿತರರು ಇದ್ದರು.

ಎಸ್ಸೆಸ್ಸೆಲ್ಸಿ ಮತ್ತು ಪಿಯು ಪರೀಕ್ಷೆಗಳಲ್ಲಿ ಉತ್ತಮ ಅಂಕ ಗಳಿಸಿದ 125ಕ್ಕೂ ಅಧಿಕ ವಿದ್ಯಾರ್ಥಿಗಳನ್ನು ಸಚಿವರು ಸನ್ಮಾನಿಸಿದರು. ಇದಕ್ಕೂ ಮೊದಲು ಅಂಬೇಡ್ಕರ್ ಪ್ರತಿಮೆಗೆ ಸಚಿವರು ಮಾಲಾರ್ಪಣೆ ಮಾಡಿದರು. ಬಳಿಕ ಭವ್ಯ ಮೆರವಣಿಗೆ ಮೂಲಕ ಸಚಿವರನ್ನು ಕಾರ್ಯಕ್ರಮ ನಡೆದ ಒಳಾಂಗಣ ಸಭಾಂಗಣಕ್ಕೆ ಕರೆತರಲಾಯಿತು.

# ಇನ್ಫೀ ಮೂರ್ತಿಗೆ ಬಡವರ ಕಷ್ಟ ಗೊತ್ತಿಲ್ಲ

## ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್.ಸಿ.ಮಹಾದೇವಪ್ಪ ತಿರುಗೇಟು

■ **ಹಂಪಿ ಟೈಮ್ಸ್ ಹೊಸಪೇಟೆ**



ರಾಜ್ಯ ಸರ್ಕಾರದ ಗ್ಯಾರೆಂಟಿಗಳ ಹೆಸರಲ್ಲಿ ಉಚಿತ ಯೋಜನೆಗಳನ್ನು ಕೊಡಬಾರದು ಎನ್ನುವ ಇನ್ಫೋಸಿಸ್ ಸಂಸ್ಥಾಪಕ ನಾರಾಯಣಮೂರ್ತಿಗೆ ಬಡವರ ಕಷ್ಟ, ಹಸಿವು ಗೊತ್ತಿಲ್ಲ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್.ಸಿ.ಮಹಾದೇವಪ್ಪ ತಿರುಗೇಟು ನೀಡಿದರು.
ಛಲವಾದಿ ಮಹಾಸಭಾ ರಾಜ್ಯ ಮತ್ತು ಜಿಲ್ಲಾ ಘಟಕದಿಂದ ನಗರದ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿ, ಈ ಹಿಂದೆ ಕೆಲ ಉದ್ಯಮಿಗಳಿಗೆ 1 ಲಕ್ಷ ರೂ. ವರೆಗೆ ಸರ್ಕಾರದಿಂದ ಸಾಲ ಮನ್ನ ಮಾಡಲಾಗಿದೆ. ಅದಕ್ಕೆ ಯಾರೊಬ್ಬರೂ ಆಕ್ಷೇಪಿಸಲಿಲ್ಲ. ಈಗ ಬಡವರಿಗೆ ಉಚಿತ ಕೊಡುಗೆಗಳನ್ನು ನೀಡುವಾಗ ಕಣ್ಣು ಕೆಂಪಾಗಿಸುವುದೇಕೆ ಎಂದು ಪ್ರಶ್ನಿಸಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಸರ್ಕಾರ ಇಂತಹ ಯಾವುದೇ ಒತ್ತಡಗಳಗೆ ಸೊಪ್ಪು ಹಾಕುವುದಿಲ್ಲ. ಗ್ಯಾರೆಂಟಿ ಯೋಜನೆಗಳಿಂದ 1.32 ಕೋಟಿ ಮಹಿಳೆಯರಿಗೆ ಮಾಸಿಕ ನಾಲ್ಕು ಸಾವಿರ ರೂ. ಬರುತ್ತಿದ್ದು, ಸಾಕಷ್ಟು ಅನುಕೂಲವಾಗಿದೆ ಎಂದು ಹೇಳಿದರು.
ಹಾವೇರಿ ಮಾಜಿ ಶಾಸಕ ನೆಹರೂ ಚ. ಓಲೇಕಾರ ಮಾತನಾಡಿ, ರಾಜ್ಯದಲ್ಲಿ ಒನಕೆ ಓಬವ್ವ ಸ್ಮರಣಾರ್ಥ ಮಹಿಳಾ ಸೈನಿಕ ಶಾಲೆ ಆರಂಭಿಸಬೇಕು. ಅಂಬೇಡ್ಕರ್ ಅವರ 160 ಅಡಿ ಎತ್ತರದ ಪ್ರತಿಮೆ ಸ್ಥಾಪಿಸಬೇಕು. ಅಂಬೇಡ್ಕರ್ ಟ್ರಸ್ಟ್‌ಗೆ ಒಂದು ಸಾವಿರ ಎಕರೆ ನೀಡಬೇಕು. ಈ ಮೂಲಕ ಬಾಬಾ ಸಾಹೇಬ ವಿಚಾರಧಾರೆ ಪ್ರಸಾರದಲ್ಲಿ ಕರ್ನಾಟಕ ಮಾದರಿ ರಾಜ್ಯವಾಗಬೇಕು ಎಂದು ಒತ್ತಾಯಿಸಿದರು.



# ಆಸಕ್ತರಿಗೆ ಅಂಗವೈಕಲ್ಯ ಅಡ್ಡಿಯಾಗದು

## ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿಕೆ | ವಿಶ್ವ ವಿಕಲಚೇತನರ ದಿನಾಚರಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಅಂಗವಿಕಲರು ಅಶಕ್ತರಲ್ಲ ಎಂಬುದಕ್ಕೆ ಅನೇಕರ ಸಾಧನೆಯೇ ಸಾಕ್ಷಿಯಾಗಿದೆ. ಅಂಗವಿಕಲರು ಅನುಕಂಪಕ್ಕಾಗಿ ಕಾಯದೇ ಅವಕಾಶಕ್ಕಾಗಿ ಹೋರಾಡಬೇಕು. ಸಮಸ್ಯೆ, ಸವಾಲುಗಳಿಗೆ ಎದೆಗುಂದದೆ ಸಾಧನೆಯತ್ತ ಹೆಜ್ಜೆ ಹಾಕಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಕರೆ ನೀಡಿದರು.

ಜಿಲ್ಲಾಡಳಿತ, ಜಿ.ಪಂ., ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಹಯೋಗದಲ್ಲಿ ಭಾನುವಾರ ನಗರದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ವಿಶ್ವ ವಿಕಲಚೇತನರ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿ, ದೇವರು ನಿಮ್ಮಿಂದ ಒಂದು ಅಂಗವನ್ನು ಕಸಿದುಕೊಂಡಿದ್ದರೂ, ಅದಕ್ಕೆ ಬದಲಾಗಿ ವಿಶೇಷ ಶಕ್ತಿಯನ್ನು ಭಗವಂತ ದಯಪಾಲಿಸಿರುತ್ತಾನೆ. ಹೀಗಾಗಿ ಕೆಲವರಿಗೆ ಅಗಾಧವಾದ ನೆನಪಿನಶಕ್ತಿ ಹೊಂದಿರುತ್ತಾರೆ. ಅದ್ಭುತ ಶಿಲ್ಪಿಕಾರರು, ಸಂಗೀತ ಕಲಾವಿದರರಾಗಿರುತ್ತಾರೆ ಎಂದು ಮೆಚ್ಚುಗೆ ಸೂಚಿಸುವ ಜತೆಗೆ ಕುವೆಂಪು ಅವರ ಕವಿ ವಾಣಿಯಂತೆ ಇಲ್ಲಿ ಯಾರೂ ಪ್ರಮುಖರಲ್ಲ ಎಂದು ಅಭಿಪ್ರಾಯ ಪಟ್ಟರು.

ಅಂಗವಿಕಲರಲ್ಲಿ ಜಾತಿ, ಧರ್ಮವನ್ನು ಮೀರಿ ನಾವೆಲ್ಲಾ ಒಂದು ಎಂಬ ಒಗ್ಗಟ್ಟಿನ ಭಾವ ಇತರರಿಗೆ ಮಾದರಿಯಾಗಿದೆ. ಅವರಲ್ಲಿ



ಸಂಸ್ಕಾರ, ಶಿಸ್ತು ಶ್ಲಾಘನೀಯ. ಇತ್ತೀಚೆಗೆ ನಡೆಸಿದ ಸಮೀಕ್ಷೆಯೊಂದರಲ್ಲಿ ಪ್ರತಿ ಕುಟುಂಬದಲ್ಲೊಬ್ಬರು ಅಥವಾ 6 ಜನರಿಗೆ ಒಬ್ಬರು ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಪ್ರತಿ ಮಾತಿಗೆ ಸಿಡುಕು ಪ್ರದರ್ಶಿಸುವುದು, ಅಸಹನೆ, ಅಸೂಯೆ ಭಾವವಿರುವ ಜನರ ಮಧ್ಯೆ ಅಂಗವೈಕಲ್ಯ ದೊಡ್ಡದಲ್ಲ. ಅಂಗವಿಲಕರ ಅಭಿವೃದ್ಧಿಗೆ ಜಿಲ್ಲಾಡಳಿತ ಸದಾ ನಿಮ್ಮೊಂದಿಗಿದೆ ಎಂದು ಅಭಯ ನೀಡಿದರು.

ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅಧಿಕಾರಿ ಕೃಷ್ಣಸಾ ಬಾಕಳೆ ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ. 16 ರಷ್ಟು ಅಂಕವಿಕಲರಿದ್ದಾರೆ.19406 ವಿಕಲಚೇತನ ರಿದ್ದಾರೆ. 177 ಗ್ರಾ.ಪಂ.ಗಳಲ್ಲಿ ವಿಆರ್ ಡಬ್ಲ್ಯೂ ಮೂಲಕ 17 ಗುರಿಗಳೊಂದಿಗೆ ಅಂಗವಿಕಲರ ಕಲ್ಯಾಣಕ್ಕೆ ಪ್ರಯತ್ನಿಸಲಾಗುತ್ತಿದೆ. ಜಿಲ್ಲೆಯಲ್ಲಿ ಅಂಗವೈಕಲ್ಯತೆಯನ್ನು ಕಡಿಮೆಗೊಳಿಸಲು ನಿರಂತರವಾಗಿ ಪ್ರಯತ್ನಿಸಲಾಗುತ್ತಿದೆ ಎಂದು ವಿವರಿಸಿದರು.

ನಗರಸಭೆ ಅಧ್ಯಕ್ಷೆ ಎ.ಲತಾ, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಶ್ವೇತಾ, ಸಿಡಿಪಿಓ ಸಿಂಧು, ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅಧಿಕಾರಿ ಕೃಷ್ಣಸಾ ಬಾಕಳೆ ಮತ್ತಿತರರು ಇದ್ದರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ತೋರಿದವರು, ವಿಶ್ವ ಅಂಗವಿಕಲರ ದಿನಾಚರಣೆ ಪ್ರಯುಕ್ತ ಏರ್ಪಡಿಸಿದ್ದ ಕ್ರೀಡಾಕೂಟ ಮತ್ತು ಸಾಂಸ್ಕೃತಿ ಸ್ಪರ್ಧೆಗಳಲ್ಲಿ ವಿಜೇತರನ್ನು ಸನ್ಮಾನಿಸಿ, ಬಹುಮಾನ ವಿತರಿಸಲಾಯಿತು.

# ದೇಹದ ಸರ್ವ ಸಮಸ್ಯೆಗಳಿಗೆ ಯೋಗ, ಮುದ್ರೆಗಳೇ ಪರಿಹಾರ

■ **ಹಂಪಿ ಟೈಮ್ಸ್ ಹೊಸಪೇಟೆ**

ಬೆನ್ನು ಹುರಿ ಸಮಸ್ಯೆ ನಮ್ಮ ದೇಹದ ಸಂಪೂರ್ಣ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಸರಳ ಯೋಗ ಹಾಗೂ ಮುದ್ರೆಗಳ ಮೂಲಕ ಪರಿಹರಿಸಿಕೊಳ್ಳಬಹುದು ಎಂದು ಹಿರಿಯ ಯೋಗ ಶಿಕ್ಷಕರೂ ಆಗಿರುವ ಡಾ.ಎಸ್.ಬಿ.ಹಂದ್ರಾಳ ಹೇಳಿದರು.
ಪತಂಜಲಿ ಯೋಗ ಸಮಿತಿಯಿಂದ ನಗರದ ಫ್ರೀಡಂ ಪಾರ್ಕ್‌ನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಿಶೇಷ ಯೋಗ ತರಬೇತಿಯಲ್ಲಿ ಮಾರ್ಗದರ್ಶನ ನೀಡಿದ ಅವರು, ಪಚನಕ್ರಿಯೆ ಸರಿಯಾಗದ ಹೊರತು ನಮ್ಮ ದೇಹ ಸಮತೋಲನದಲ್ಲಿರಲು ಸಾದ್ಯವಿಲ್ಲ. ಹಸಿವಾದಾಗ ಸಮಸ್ಥಿತಿಯ ಆಹಾರ ಸೇವಿಸುವ ಪರಿಪಾಠ ಬೆಳೆಸಿಕೊಳ್ಳಬೇಕು. ವಾತ, ಪಿತ್ತ, ಕಫಗಳೆಂಬ ತ್ರಿದೋಷಗಳಿಂದ ಸಂಧಿವಾತ, ಸೊಂಟ ನೋವು, ಬೆನ್ನು ನೋವು ಮತ್ತು ನರಗಳ ದುರ್ಬಲ್ಯಗಳ ನಿವಾರಣೆಗೆ ಮುದ್ರೆಗಳು ನೆರವಾಗುತ್ತವೆ ಎಂದು ಹೇಳಿದರು.
ಇದೇ ವೇಳೆ ವಾತ ಶಮನ ಮುದ್ರೆಗಳು, ವಿಶೇಷ ಪ್ರಾಣಾಯಾಮ ಕುರಿತು ಯೋಗ ಸಾಧಕರಿಗೆ ಮಾರ್ಗದರ್ಶನ ನೀಡಿದರು. ವಿಶೇಷ ಶಿಬಿರದಲ್ಲಿ ಯುವ ಭಾರತ ರಾಜ್ಯ ಪ್ರಭಾರಿ ಕಿರಣಕುಮಾರ್, ರಾಜೇಶ್ ಕರ್ವಾ, ಸತ್ಯಪ್ಪ, ಮಂಗಳಮ್ಮ, ಚಂದ್ರಿಕಾ, ಶ್ರೀರಾಮ, ಸುಜಾತಾ, ಶೈಲಜಾ ಕಳಕಪ್ಪ, ಮಲ್ಲಿಕಾರ್ಜುನ, ಶ್ರೀನಿವಾಸ, ಎಂ.ಅನಂತ ಜೋಶಿ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.



# ಡಿ ದರ್ಜೆಗೆ ಹಕ್ಕೊತ್ತಾಯಿಸಿ, ಡಿ.11ಕ್ಕೆ ಗ್ರಾಮ ಸಹಾಯಕರ ಸಂಘ ಬೆಳಗಾವಿಯಲ್ಲಿ ಬೃಹತ್ ಮುಷ್ಕರ

■ **ಹಂಪಿ ಟೈಮ್ಸ್ ಕೊಟ್ಟೂರು**

ಕಂದಾಯ ಇಲಾಖೆಯ ಗ್ರಾಮ ಸಹಾಯಕರ ವೇತನ ಪರಿಷ್ಕರಿಸಿ ಡಿ ದರ್ಜೆಯ ನೌಕರರೆಂದು ಪರಿಗಣಿಸುವಂತೆ ಆಗ್ರಹಿಸಿ ಡಿ.11ಕ್ಕೆ ಸುವರ್ಣ ಸೌದ ಬೆಳಗಾವಿಯಲ್ಲಿ ಕರ್ನಾಟಕ ರಾಜ್ಯ ಗ್ರಾಮ ಸಹಾಯಕರ ಸಂಘ ಬೃಹತ್ ಮುಷ್ಕರಕ್ಕೆ ಹಮ್ಮಿಕೊಂಡಿದೆ.
ಕೊಟ್ಟೂರು ತಾಲೂಕು ಕಂದಾಯ ಇಲಾಖೆಯ ಗ್ರಾಮ ಸಹಾಯಕರು ತಹಶೀಲ್ದಾರರು ಕೊಟ್ಟೂರು ಇವರಿಗೆ ಮನವಿ ಕೊಟ್ಟು ವಿವಿಧ ಬೇಡಿಕೆಗಳ ಹಕ್ಕೊತ್ತಾಯದ ಅನಿರ್ದಿಷ್ಟಾವದಿ ಪ್ರತಿ ಭಟನೆ ಬೆಂಬಲಿಸಿ ಬೆಳಗಾವಿ ಕಿತ್ತೂರಾಣಿ ಚೆನ್ನಮ್ಮ ಅರಮನೆ ಮೈದಾನದಿಂದ ವಿಧಾನಸೌಧದ ವರೆಗೆ ನಡೆಯುವ ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲು ಮನವಿ ಮಾಡಿಕೊಂಡರು.
ಜಿಲ್ಲಾ ಪ್ರಧಾನ ಕಾರ್ಯದರ್ಶಿ ನವೀನ ಕುಮಾರ ಎಂ.ತಾಲೂಕು ಅಧ್ಯಕ್ಷ



ಪಕ್ಕಿರಪ್ಪ ಉಪಾಧ್ಯಕ್ಷ ಟಿ. ಹನುಮಂತಪ್ಪ, ಗೌರವಾಧ್ಯಕ್ಷ ಭರಮಪ್ಪ. ತಾಲೂಕು ಖಜಾಂಚಿ ಶಿವರಾಜ್ ಹೆಚ್, ಪ್ರಧಾನ ಕಾರ್ಯದರ್ಶಿ ಚಿದಾನಂದ, ಸದಸ್ಯ ಸ್ವಾಮಿ, ಭೀಮ ಸೇನಾ, ಹುಲಿಗೇಶ, ವೆಂಕಟೇಶ ಬಿ.ಹಾಗೂ ತಾಲ್ಲೂಕಿನ ಎಲ್ಲಾ ಗ್ರಾಮ ಸಹಾಯಕರು ಉಪಸ್ಥಿತರಿದ್ದರು.

# ಬಣಗಾರಗೆ ತಾರೆ ನೀ ಮಿನುಗು ಪ್ರಶಸ್ತಿ ಪ್ರದಾನ




**ಹಂಪಿ ಟೈಮ್ಸ್ ಹೊಸಪೇಟೆ:** ದಾವಣಗೆರೆಯಲ್ಲಿ ಭಾನುವಾರ ಒಬಿಎಂ ಮತ್ತು ಕೆಬಿಜೆ ಸಂಸ್ಥೆ ಸಂಘಟಿಸಿದ್ದ ತಾರೆ ನೀ ಮಿನುಗು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಖ್ಯಾತ ಛಾಯಗಾಹಕ ಶಿವಶಂಕರ ಬಣಗಾರ ಇವರ ಛಾಯಾಗ್ರಹಣ ಸೇವೆಗೆ ಸಮ್ಮಾನ ನೀಡಿ ಗೌರವಿಸಿ ಛಾಯಾಗ್ರಹಣ ಕಲೆಯನ್ನು ಶ್ಲಾಘಿಷಿದರು..
ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ 50 ಜನ ಸಾಧಕರಿಗೆ ತಾರೆ ನೀ ಮಿನುಗು ಎನ್ನುವ ಪ್ರಶಸ್ತಿಯನ್ನು ನೀಡಲಾಯಿತು.

ಮೈಕ್ರೋ ನ್ಯೂಸ್

## ಮೇಘಾಲಯ ಬಾಲ್ಯ ಶಿಕ್ಷಣಕ್ಕೆ ಪ್ರೇರಣೆ

ಮೊದಲ ಪುಟದಿಂದ

ಕರ್ನಾಟಕದಲ್ಲಿ ತುಂಬಾ ಚೆನ್ನಾಗಿ 3 ರಿಂದ 6 ವರ್ಷದ ಮಕ್ಕಳಿಗೆ ಬಾಲ್ಯಾರಂಭಿಕ ಶಿಕ್ಷಣವನ್ನು ನೀಡಲಾಗುತ್ತಿದೆ. ನಮ್ಮಲ್ಲಿಯು ಸಹ ಇದೇ ರೀತಿಯ ವ್ಯವಸ್ಥೆ ಮಾಡಿಕೊಳ್ಳಲು ಈ ಕ್ಷೇತ್ರಭೇಟಿಯು ಪ್ರೇರಣೆ ನೀಡಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಶ್ವೇತಾ ಎಸ್., ಜಿಲ್ಲಾ ನಿರೂಪಣಾಧಿಕಾರಿ ಸುಭದ್ರಾದೇವಿ, ಶಾಲಾಪೂರ್ವ ಶಿಕ್ಷಣದ ಹಿರಿಯ ಅಧಿಕಾರಿ ಡಾ. ಚಿತ್ಕಲಾಂಬ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಿಂಧೂ, ಹಿರಿಯ ಮೇಲ್ವಿಚಾರಕಿ ಅಂಬುಜ, ವಲಯದ ಮೇಲ್ವಿಚಾರಕಿಯರಾದ ಲಕ್ಷ್ಮೀದೇವಿ, ಎಲ್.ಡಿ ನಧಾಫ್, ನಸೀಮ ಬೇಗಮ್, ಸುಜಾತ, ಕಾರ್ಯಕ್ರಮದ ಜಿಲ್ಲಾ ವ್ಯವಸ್ಥಾಪಕ ಕೊಟ್ರೇಶ ಎ.ವೈ., ಅಂಗನವಾಡಿ ಕಾರ್ಯಕರ್ತೆಯರು ಹಾಜರಿದ್ದರು. ನಂತರ ಮೇಘಾಲಯದ ವಿವಿಧ ಇಲಾಖೆಗಳ ಅಧಿಕಾರಿಗಳು ಜಿಲ್ಲಾಧಿಕಾರಿ ಕಚೇರಿಗೆ ಭೇಟಿ ನೀಡಿ, ಜಿಲ್ಲೆಯಲ್ಲಿನ ಮಕ್ಕಳ ಶಾಲಾ ಪೂರ್ವ ಶಿಕ್ಷಣ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಜಿಲ್ಲೆಯ ಶಾಲಾಪೂರ್ವ ಶಿಕ್ಷಣವು ದೇಶದಲ್ಲಿ ಮುಂಚೂಣಿಯಲ್ಲಿರುವುದು ತುಂಬಾ ಖುಷಿಯಿದೆ. ಮಕ್ಕಳ ಕಲಿಕೆಗೆ ಶಾಲಾಪೂರ್ವ ಶಿಕ್ಷಣವು ಮಹತ್ತರವಾದ ಸ್ಥಾನಪಡೆದು ಕೊಂಡಿದೆ. ಜಿಲ್ಲೆಯಲ್ಲಿ ಕಾರ್ಯಕ್ರಮದ ಇನ್ನೂ ಪರಿಣಾಮಕಾರಿಗೊಳಿಸುವ ನಿಟ್ಟಿನಲ್ಲಿ ಸಾಗುತ್ತೇವೆ ಎಂದು ಹೇಳಿದರು.

## ಕಲ್ಯಾಣ ಕರ್ನಾಟಕ ಶಿಕ್ಷಕರ ನೇಮಕಾತಿಗೆ ಕ್ರಮ-ಸಚಿವ ಮಧು ಬಂಗಾರಪ್ಪ

**ಬೆಳಗಾವಿ:** ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಾಲಾ ಶಿಕ್ಷಕರ ಕೊರತೆಯನ್ನು ತುಂಬುವುದರ ಜೊತೆಗೆ ಈ ಭಾಗದ ಶಾಲೆಗಳಿಗೆ ಅಗತ್ಯವಿರುವ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಆದ್ಯತೆಯಲ್ಲಿ ಒದಗಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಕ್ಷರತಾ ಸಚಿವ ಎಸ್. ಮಧು ಬಂಗಾರಪ್ಪ ಹೇಳಿದರು.

ವಿಧಾನಪರಿಷತ್ತಿನ ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯರಾದ ಶಶೀಲ್ ನಮೋಶಿ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವರು, ಶಾಲಾ ಶಿಕ್ಷಣ ಆಯುಕ್ತಾಲಯದಲ್ಲಿ ಹಲವು ವರ್ಷಗಳಿಂದ ಬೀಡು ಬಿಟ್ಟಿರುವ ಸಿಬ್ಬಂದಿಗಳ ವರ್ಗಾವಣೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ರಾಜ್ಯದ ಪ್ರಾಥಮಿಕ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ನೇಮಕ ಕುರಿತಂತೆ ಸದಸ್ಯ ಎಸ್.ವಿ. ಸಂಕನೂರ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವ ಎಸ್. ಮಧು ಬಂಗಾರಪ್ಪ ಅವರು, ಪ್ರಾಥಮಿಕ ಶಾಲಾ ವಿಭಾಗದಲ್ಲಿ ಖಾಲಿ ಇರುವ 2120 ದೈಹಿಕ ಶಿಕ್ಷಕರು ಹಾಗೂ ಪ್ರೌಢಶಾಲಾ ವಿಭಾಗದಲ್ಲಿ 2500 ಹುದ್ದೆಗಳ ಭರ್ತಿ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಸಮಾಲೋಚನೆಯಲ್ಲಿದೆ. ಪದವಿ ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರನ್ನು ಆದಷ್ಟು ಶೀಘ್ರದಲ್ಲಿ ನೇಮಕ ಮಾಡಲಾಗುವುದು ಎಂದರು.

## ಆನೆ ಹಾವಳಿ ನಿಯಂತ್ರಣ ಸಿಬ್ಬಂದಿಗೆ ಹೆಚ್ಚಿನ ತರಬೇತಿ-ಸಚಿವ ಈಶ್ವರ ಖಂಡ್ರೆ

**ಬೆಳಗಾವಿ:** ರಾಜ್ಯದಲ್ಲಿ ಈಗಾಗಲೇ ಏಳು ಆನೆ ಕಾರ್ಯಪಡೆ ತಂಡಗಳನ್ನು ರಚಿಸಲಾಗಿದ್ದು, ಆನೆ ಹಿಡಿಯಲು ನಿಯೋಜಿಸಿರುವ ಸಿಬ್ಬಂದಿಗಳಿಗೆ ಹೆಚ್ಚಿನ ತರಬೇತಿ ನೀಡಲಾಗುವುದ ಎಂದು ಅರಣ್ಯ ,ಜೈವಿಕ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಹೇಳಿದರು, ವಿಧಾನಪರಿಷತ್ತಿನ ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯೆ ಡಾ.ತೇಜಸ್ವಿನಿ ಗೌಡ ಅವರು, ಆನೆ ಹಾವಳಿ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಆನೆಗಳು ಜನವಸತಿ ಪ್ರದೇಶಕ್ಕೆ ಬರುವುದನ್ನು ತಡೆಯಲು ಅನೆ ಕಂದಕ ನಿರ್ಮಾಣ, ರೇಲ್ವೇ ಬ್ಯಾರಿಕೇಡ್‌ಗಳ ಅಳವಡಿಕೆಯನ್ನು ಮಾಡಲಾಗುವುದು ಎಂದರು.

### ಬೆಳಗಾವಿಯ ಸುವರ್ಣ ಸೌಧದಲ್ಲಿ ಚಳಿಗಾಲದ ಅಧಿವೇಶನ ಆರಂಭ | ಅಗಲಿದ ಚೇತನರಿಗೆ ಸಂತಾಪ

# ಮಕ್ಕಳಿಗೆ ಅಧಿವೇಶನ ಕಲಾಪ ವೀಕ್ಷಣೆ ಭಾಗ್ಯ





■ **ಹಂಪಿ ಟೈಮ್ಸ್ ಬೆಳಗಾವಿ**

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ವಿಧಾನಮಂಡಳ ಚಳಿಗಾಲ ಅಧಿವೇಶನ ವೀಕ್ಷಣೆಗೆ ಆಗಮಿಸುವ ಶಾಲಾ ಮಕ್ಕಳಿಗೆ ಇದೇ ಮೊದಲ ಬಾರಿ ವಿಶೇಷ ಆತಿಥ್ಯ ನೀಡಲಾಯಿತು.

ಕಲಾಪ ವೀಕ್ಷಣೆಗೆ ತಂಡೋಪತಂಡವಾಗಿ ಆಗಮಿಸುವ ಮಕ್ಕಳನ್ನು ಸುವರ್ಣ ವಿಧಾನಸೌಧದ ಉತ್ತರ ದ್ವಾರದ ಬಳಿಯ ಆಡಿಟೋರಿಯಂನಲ್ಲಿ ಸಂವಿಧಾನ, ಪ್ರಜಾಪ್ರಭುತ್ವ ಕುರಿತು ಅರಿವು ಮೂಡಿಸಲಾಗುತ್ತಿದೆ. ಇದಲ್ಲದೇ ರಾಜ್ಯದ ಕಲೆ-ಸಂಸ್ಕೃತಿ, ಪ್ರವಾಸೋದ್ಯಮ ಕುರಿತ ಕಿರುಚಿತ್ರಗಳನ್ನು ಪ್ರದರ್ಶಿಸಲಾಗುತ್ತಿದೆ. ಚಳಿಗಾಲ ಅಧಿವೇಶನದ ಮೊದಲ ದಿನವಾದ ಸೋಮವಾರ ಸುವರ್ಣ ವಿಧಾನಸೌಧದ ಆಡಿಟೋರಿಯಂನಲ್ಲಿ ಮಕ್ಕಳಿಗೆ ಸಂವಿಧಾನ ಪೀಠಿಕೆ ಓದಿಸಲಾಯಿತು.

ಇದಾದ ಬಳಿಕ ಸಂಪನ್ಮೂಲ ವ್ಯಕ್ತಿಗಳು ಸಂವಿಧಾನದಲ್ಲಿ ತಿಳಿಸಿರುವಂತಹ ಮೂಲಭೂತ ಹಕ್ಕು ಹಾಗೂ ಕರ್ತವ್ಯಗಳ ಕುರಿತು ತಿಳಿಸಿಕೊಟ್ಟರು. ಮಕ್ಕಳು ದೇಶದ ಭವಿಷ್ಯ. ಆದ್ದರಿಂದ ಅವರಿಗೆ ಸಂವಿಧಾನ, ಪ್ರಜಾಪ್ರಭುತ್ವ, ಶಾಸಕಾಂಗ ಮತ್ತಿತರ ವಿಷಯಗಳ ಬಗ್ಗೆ ತಿಳಿಸಿಕೊಡಬೇಕು ಎಂಬುದು ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ.ಖಾದರ್ ಫರೀದ್ ಅವರ ಆಶಯ ಆಗಿದೆ. ಅವರ ಆಶಯದಂತೆ ಕಾರ್ಯರೂಪಕ್ಕೆ ತರಲಾಗಿರುತ್ತದೆ. ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ಅತ್ಯಂತ ಮುತುವರ್ಜಿಯಿಂದ ಮಕ್ಕಳಿಗೆ ಉತ್ತಮ ವ್ಯವಸ್ಥೆಯನ್ನು ಕಲ್ಪಿಸುವ ಮೂಲಕ ಮೊದಲ ದಿನವೇ ಯಶಸ್ವಿಗೊಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕರಾದ ವಿದ್ಯಾವತಿ ಭಜಂತ್ರಿ ಅವರ ನೇತೃತ್ವದ ಸಮಿತಿಯು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಅಧಿವೇಶನದ ಮುಕ್ತಾಯದ ವರೆಗೆ ಪ್ರತಿದಿನ ಇದು ಮುಂದುವರಿಯಲಿದೆ. ಕಲಾಪ ವೀಕ್ಷಣೆಗೆ ಬಂದು ಸರದಿಗಾಗಿ ಕಾರಿಡಾರ್ ನಲ್ಲಿ ಕಾಯುತ್ತ ಕುಳಿತುಕೊಳ್ಳುವುದು ತಾಪತ್ರಯ ಮಕ್ಕಳಿಗಿರು ವುದಿಲ್ಲ. ಇದರಿಂದ ಸಮಯದ ಸದುಪಯೋಗ ಆಗುವುದರ ಜತೆಗೆ ಸಂವಿಧಾನ, ಪ್ರಜಾಪ್ರಭುತ್ವ ವ್ಯವಸ್ಥೆ, ಶಾಸಕಾಂಗದ ಕಾರ್ಯವೈಖರಿಯ ಕುರಿತು ತಿಳಿವಳಿಕೆ ಕೂಡ ಮೂಡಿಸುವುದರಿಂದ ಇದೊಂದು ಅತ್ಯುತ್ತಮ ಪ್ರಯೋಗವಾಗಿದೆ ಎಂದು ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮಕ್ಕಳು ಕೂಡ ಸಂತಸದಿಂದ ಕಲಾಪವನ್ನು ವೀಕ್ಷಿಸುವಂತಾಗಿದೆ.



## ಅಗಲಿದ ಗಣ್ಯರಿಗೆ ಸಂತಾಪ

■ **ಹಂಪಿ ಟೈಮ್ಸ್ ಬೆಳಗಾವಿ:**

ಹದಿನಾರನೇ ವಿಧಾನಸಭೆಯ ಎರಡನೇ ಅಧಿವೇಶನ ಬೆಳಗಾವಿಯ ಸುವರ್ಣ ಸೌಧದಲ್ಲಿ ಸೋಮವಾರದಿಂದ ಆರಂಭವಾಗಿದೆ. ವಿಧಾನ ಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್ ಹಾಗೂ ಸದನದ ಸದಸ್ಯರು ಸಂವಿಧಾನ ಪೀಠಿಕೆ ಓದುವ ಮೂಲಕ ಅಧಿಕವೇಶನದ ಕಾರ್ಯ ಕಲಾಪಗಳಿಗೆ ಚಾಲನೆ ನೀಡಿದರು.

ಸಭಾಧ್ಯಕ್ಷ ಯು.ಟಿ.ಖಾದರ್ ಅವರು, ಮಾಜಿ ಸಭಾಧ್ಯಕ್ಷ ಡಿ.ಬಿ.ಚಂದ್ರೇಗೌಡ, ಮಾಜಿ ಸಚಿವ ಶ್ರೀರಂಗದೇವರಾಯಲು, ಮಾಜಿ ಶಾಸಕರುಗಳಾದ ಸಿ. ವೆಂಕಟೇಶಪ್ಪ, ಶ್ರೀಕಾಂತ್ ಶೆಟ್ಟಪ್ಪ ಭೀಮಣ್ಣವರ, ವಿಲಾಸಬಾಬು ಆಲಮೇಕರ್, ಈಶಾನ್ಯ ರಾಜ್ಯಗಳ ಮಾಜಿ ರಾಜ್ಯಪಾಲರಾಗಿದ್ದ ಪಿ.ಬಿ.ಆಚಾರ್ಯ ಹಾಗೂ ಇತ್ತೀಚೆಗೆ ಉಗ್ರರ ದಾಳಿಯಲ್ಲಿ ಮೃತಪಟ್ಟ ಕರ್ನಾಟಕದ ಮಂಗಳೂರು ಜಿಲ್ಲೆಯ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಸೇರಿದಂತೆ ಕ್ಯಾಪ್ಟನ್ ಶುಭಂ ಗುಪ್ತಾ, ಹವಾಲ್ದಾರ್ ಅಬ್ದುಲ್ ಮಜಿದ್, ಲಾನ್ಸ್ ನಾಯ್ಕ್ ಸಂಜಯ್ ಬಿಸ್ಟ್ ಮತ್ತು ಪಾರಾಟ್ರುಪರ್ ಸಚಿನ್ ಲಾರ್ ಅವರಿಗೆ ಸಂತಾಪ ಸೂಚನಾ ನಿರ್ಣಯವನ್ನು ಸದನದಲ್ಲಿ ಮಂಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಾಪ ನಿರ್ಣಯದ ಮೇಲೆ ಮಾತನಾಡಿ, ಅವರವರ ಅಧಿಕಾರದ ಅವಧಿಯಲ್ಲಿ ಹಲವು ಜನಪರ ಕಾರ್ಯಗಳನ್ನು ಕೈಗೊಂಡು ಜನಮಾನಸದಲ್ಲಿ ಚಿರಸ್ಥಾಯಿಯಾಗಿದ್ದಾರೆ ಎಂದರು.

ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಡಿ.ಬಿ.ಚಂದ್ರೇಗೌಡ ರಾಜ್ಯದ ಮುತ್ಸದ್ದಿ ರಾಜಕಾರಣಿ ಆಗಿದ್ದರು. ಉಗ್ರರೊಂದಿಗೆ ದಿಟ್ಟತನದಿಂದ ಹೋರಾಡಿ ಹುತಾತ್ಮರಾದ ಕರ್ನಾಟಕದ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಹಾಗೂ ಅವರ ಸಹೊದ್ಯೋಗಿ ಯೋಧರ ತ್ಯಾಗವನ್ನು ದೇಶದ ಜನತೆ ಮರೆಯುವುದಿಲ್ಲ ಎಂದರು. ಸಂತಾಪ ಸೂಚನೆ ನಿರ್ಯಣದ ಮೇಲೆ ಗೃಹ ಸಚಿ ಡಾ.ಜಿ.ಪರಮೇಶ್ವರ್, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಶಾಸಕರಾದ ಅರಗ ಜ್ಞಾನೇಂದ್ರ, ಹೆಚ್.ಕೆ.ಪಾಟೀಲ್, ವಿಜಯೇಂದ್ರ, ಜನಾರ್ದನ ರೆಡ್ಡಿ, ಬಸವರಾಜ ರಾಯರೆಡ್ಡಿ, ಬಿ.ಆರ್.ಪಾಟೀಲ್, ಶಾಸಕಿ ನಯನ ಮೋಟಮ್ಮ ಸೇರಿದಂತೆ ಇತರ ಶಾಸಕರು ಮಾತನಾಡಿದರು. ಮೃತರ ಗೌರವಾರ್ಥ ಸದನದಲ್ಲಿ ಒಂದು ನಿಮಿಷ ಮೌನಾಚರಣೆ ಆಚರಿಸಲಾಯಿತು.

## ರಾಯಚೂರು ಜಿಲ್ಲೆಗೆ 107 ಹೊಸ ಬಸ್‌ಗಳು

■ **ಹಂಪಿ ಟೈಮ್ಸ್ ಬೆಳಗಾವಿ**

ರಾಯಚೂರು ಜಿಲ್ಲೆಯ 7 ಸಾರಿಗೆ ಘಟಕಗಳಿಗೆ 107 ಹೊಸ ಬಸ್‌ಗಳನ್ನು ಒದಗಿಸಲಾಗಿದ್ದು, ಅವಶ್ಯಕತೆಗನುಗುಣವಾಗಿ ಜಿಲ್ಲೆಗೆ ಇನ್ನೂ ಹೊಸಬಸ್‌ಗಳು ಒದಗಿಸಲು ಬದ್ಧ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾರೆಡ್ಡಿ ಅವರು ಹೇಳಿದರು.

ವಿಧಾನಸಭೆಯಲ್ಲಿ ಶಾಸಕ ಬಸವನಗೌಡ ದದ್ದಲ್ ಅವರು ಕೇಳಿದ ಚುಕ್ಕೆಗುರುತಿನ ಪ್ರಶ್ನೆಗೆ ಅವರು ಉತ್ತರಿಸಿ ಮಾತನಾಡಿದರು. ಪೂರ್ಣಕವಚ ನಿರ್ಮಿತ 250 ವೇಗದೂತ ಸಾರಿಗೆಗಳನ್ನು ಖರೀದಿಸಲು ಅನುಮೋದನೆ ನೀಡಲಾಗಿದೆ. ಪೂರ್ಣಕವಚ ನಿರ್ಮಿತ 93 ನಗರ ಸಾರಿಗೆ ಬಸ್‌ಗಳನ್ನು ಡಲ್ಟ್ ಆರ್ಥಿಕ ಸಹಾಯದಿಂದ ಖರೀದಿಸಲು ಮಂಜೂರಾತಿ ದೊರೆತಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿದೆ ಎಂದು ಅವರು ಹೇಳಿದರು. ಮುಂದಿನ ದಿನಗಳಲ್ಲಿ ಪೂರ್ಣಗೊಂಡ ಹೊಸಬಸ್ ಡಿಪೋ ಜೊತೆಗೆ ಇತರೆ ಘಟಕಗಳಿಗೆ ಅವಶ್ಯಕತೆಗನುಗುಣವಾಗಿ ಹೊಸ ಬಸ್‌ಗಳನ್ನು ಒದಗಿಸಲಾಗುವುದು ಎಂದು ಹೇಳಿದರು.

ರಾಯಚೂರಿನಲ್ಲಿ ನೂತನ ಬಸ್‌ಘಟಕದ ಕಾಮಗಾರಿ ಪೂರ್ಣಗೊಂಡಿದ್ದು,ಶೀಘ್ರದಲ್ಲಿ ಉದ್ಘಾಟಿಸಿ ಕಾರ್ಯಾಚರಣೆ ಪ್ರಾರಂಭಿಸಲಾಗುವುದು ಎಂದು ಭರವಸೆ ನೀಡಿದ ಅವರು ರಾಯಚೂರು ಜಿಲ್ಲೆಯಲ್ಲಿ ಒಟ್ಟು 07 ಬಸ್‌ಘಟಕಗಳಿದ್ದು,665ಬಸ್‌ಗಳಿದ್ದು,ಅವುಗಳಲ್ಲಿ 654 ಬಸ್‌ಗಳು ಚಾಲನೆಯಲ್ಲಿವೆ ಎಂದು ಅವರು ತಿಳಿಸಿದರು.

## ಕೃಷಿ ಪಂಪ್‌ಸೆಟ್‌ಗಳಿಗೆ ನಿತ್ಯ 7 ಗಂಟೆ ತ್ರಿಫೇಸ್ ವಿದ್ಯುತ್

■ **ಹಂಪಿ ಟೈಮ್ಸ್ ಬೆಳಗಾವಿ**

ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಪ್ರಸ್ತುತ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ದಿನನಿತ್ಯ 7 ಗಂಟೆಗಳ ಕಾಲ ತ್ರಿಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಹೇಳಿದರು. ವಿಧಾನಪರಿಷತ್‌ನಲ್ಲಿ ಸದಸ್ಯ ಛಲವಾದಿ ನಾರಾಯಣಸ್ವಾಮಿ ಅವರು ಕೇಳಿದ ಪ್ರಶ್ನೆಗೆ ಇಂಧನ ಸಚಿವರ ಪರವಾಗಿ ಅವರು ಉತ್ತರಿಸಿದರು.

ರೈತರ ಪಂಪ್‌ಸೆಟ್‌ಗಳಿಗೆ 7 ಗಂಟೆಗಳ ಕಾಲ ತ್ರಿಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ರಾಜ್ಯದ ವಿವಿಧ ಭಾಗಗಳಲ್ಲಿನ ಬೇಡಿಕೆಗಳ ಹಿನ್ನೆಲೆಯಲ್ಲಿ ಭತ್ತ ಮತ್ತು ಕಬ್ಬು ಬೆಳೆಗಳ ಕಟಾವು ಪೂರ್ವ ಅವಧಿಯಲ್ಲಿ 7 ಗಂಟೆಗಳಿಗೂ ಹೆಚ್ಚಿನ ಅವಧಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಕೆಲವು ಪ್ರದೇಶಗಳಲ್ಲಿ ಸ್ಥಳೀಯ ಅವಶ್ಯಕತೆಗೆ ತಕ್ಕಂತೆ ಹಗಲಿನಲ್ಲಿ 4 ಗಂಟೆಗಳು ಹಾಗೂ ರಾತ್ರಿ ವೇಳೆ 3 ಗಂಟೆಗಳು ಸೇರಿ 7 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಈ ವರ್ಷ ಬರಗಾಲವಾಗಿರುವುದರಿಂದ ಕೃಷಿ ಪಂಪ್‌ಸೆಟ್‌ಗಳ ವಿದ್ಯುತ್ ಬಳಕೆ ಪ್ರಮಾಣ ದ್ವಿಗುಣವಾಗಿರುವುದರಿಂದ,ಲಭ್ಯ ಸಂಪನ್ಮೂಲಗಳಿಂದ ವಿದ್ಯುತ್ ಪಡೆದು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದ ಸಚಿವ ಪ್ರಿಯಾಂಕ್ ಖರ್ಗೆ ಅವರು ಕೆಲವು ಸಮಯಗಳಲ್ಲಿ ತಾಂತ್ರಿಕ ಕಾರಣಗಳಿಂದ ವಿದ್ಯುತ್ ಲಭ್ಯತೆ/ಉತ್ಪಾದನೆ ಕುಂಠಿತಗೊಂಡು ಸೀಮಿತ ಪ್ರಮಾಣದಲ್ಲಿ ವಿದ್ಯುತ್ ಸರಬರಾಜು ಮಾಡಿರುವುದನ್ನು ಇದೇ ಸಂದರ್ಭದಲ್ಲಿ ತಿಳಿಸಿದರು.

## ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್ ವಿತರಣೆಗೆ ಕ್ರಮ

■ **ಹಂಪಿ ಟೈಮ್ಸ್ ಬೆಳಗಾವಿ**

ರಾಜ್ಯದಲ್ಲಿ ಮುಟ್ಟು ಮತ್ತು ಮುಟ್ಟಿನ ಶುಚಿತ್ವದ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಶುಚಿ ಕಾರ್ಯಕ್ರಮ ರೂಪಿಸಲಾಗಿದ್ದು, ಅದರಡಿ ವಿವಿಧ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ. 40 ಕೋಟಿ ರೂ. ವೆಚ್ಚದಲ್ಲಿ ಸರಕಾರಿ ಹಾಗೂ ಸರಕಾರಿ ಅನುದಾನಿತ ಶಾಲಾ/ಕಾಲೇಜುಗಳ 10 ರಿಂದ18ವಯೋಮಾನದ19.30ಲಕ್ಷವಿದ್ಯಾರ್ಥಿನಿಯರಿಗೆ ಶಾಲೆ ಮತ್ತು ಹಾಸ್ಟೆಲ್‌ಗಳಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್ ವಿತರಣೆಗೆ ಕ್ರಮಕೈಗೊಳ್ಳಲಾಗುತ್ತಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ ಗುಂಡೂರಾವ್ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಸದಸ್ಯ ಕೆ.ಎ.ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದರು. ಶುಚಿ ಕಾರ್ಯಕ್ರಮದಡಿ ಹದಿಹರೆಯದವರಲ್ಲಿ ಋತುಸ್ರಾವದ ಶುಚಿತ್ವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಒದಗಿಸುವುದರ ಮುಖಾಂತರ ಬಳಕೆಯನ್ನು ಪ್ರೋತ್ಸಾಹಿಸು ವುದು ಹಾಗೂ ಮುಟ್ಟಿನ ವೈಜ್ಞಾನಿಕ ನಿರ್ವಹಣೆಯ ಕುರಿತು ಮಾರ್ಗದರ್ಶನ ನೀಡಲಾಗುತ್ತಿದೆ ಎಂದರು.

## ಮಕ್ಕಳ ಆರೈಕೆಯಲ್ಲಿ ಭೇದ-ಭಾವ ಬೇಡ



■ **ಹಂಪಿ ಟೈಮ್ಸ್ ಹರಪನಹಳ್ಳಿ**

ಕೂಸಿನಮನೆಗೆ ಬರುವ ಮಕ್ಕಳನ್ನು ಆರೈಕೆ ಮಾಡುವಾಗ ಭೇದ-ಭಾವ ಮಾಡದೆ ಎಲ್ಲರೂ ಒಂದೇ ತಾಯಿ ಮಕ್ಕಳಂತೆ ಕಂಡು ನೋಡಿಕೊಳ್ಳುವ ಜವಾಬ್ದಾರಿ ಕೂಸಿನ ಮನೆಯ ಆರೈಕೆದಾರರ ಮೇಲಿದೆ ಎಂದು ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕೆ. ಆರ್.ಪ್ರಕಾಶ್ ತಿಳಿಸಿದರು.

ತಾಲೂಕು ಪಂಚಾಯಿತಿ ಆವರಣದಲ್ಲಿರುವ ರಾಜೀವಗಾಂಧಿ ಸಭಾಂಗಣದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಶ್ರಯದಲ್ಲಿ ಕೂಸಿನ ಮನೆಯ ಮಕ್ಕಳನ್ನು ಆರೈಕೆ ಮಾಡುವವರಿಗೆ ಸೋಮವಾರ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಕೂಸಿನಮನೆ ಸ್ಥಾಪನೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ದೊಡ್ಡ ಮತ್ತು ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾಗಿದೆ. ಈ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಿ ಮಕ್ಕಳ ಬೌದ್ಧಿಕತೆ, ಮಾನಸಿಕ, ಆರೋಗ್ಯಯುತವಾಗಿ ನೋಡಿಕೊಳ್ಳುವುದು ಆರೈಕೆದಾರರ ಮೇಲೆ ಇರುತ್ತದೆ. ತರಬೇತಿಗೆ 37 ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸುಸಜ್ಜಿತ ಕಟ್ಟಡಗಳನ್ನು ಆಯ್ಕೆ ಮಾಡಲಾಗಿದ್ದು, ಕೂಸಿನೆ ಮನೆ ಆರಂಭಿಸಲಾಗುವುದು. ಪ್ರತೀ ಪಂಚಾಯಿತಿಯ ಒಂದು ಕಡೆ ಕೂಸಿನ ಮನೆ ಆರಂಭ ಮಾಡಲಾಗುವುದು ಎಂದು ತಿಳಿಸಿದರು.

ತಾಲೂಕು ನರೇಗಾ ಸಹಾಯಕ ನಿರ್ದೇಶಕರಾದ ಯು.ಎಚ್.ಸೋಮಶೇಖರ್, ಸಹಾಯಕ ನಿರ್ದೇಶಕ(ಪಂ.ರಾಜ್)ರಾದ ವೀರಣ್ಣ ಲಕ್ಕಣ್ಣನವರ್ ಮಾತನಾಡಿದರು. ಈ ಸಂದರ್ಭದಲ್ಲಿ ಐಇಸಿ ಸಂಯೋಜಕರಾದ ಕೆ.ವಸಿಗೇರಪ್ಪ ಚಾಗನೂರು, ತರಬೇತುದಾರರಾದ ಸಿಡಿಪಿಒ ಇಲಾಖೆಯ ರೇಣುಕಾ ಜುಟ್ಲೆ, ಹೇಮಾ ಮತ್ತಿತರರು ಇದ್ದರು.

ಹಂಪಿ ಟೈಮ್ಸ್
ಇ-ಪೇಪರ್ ಉಚಿತ
ಇಂದೇ ಹಂಪಿ ಟೈಮ್ಸ್
ವಾಟ್ಸ್‌ಪ್ ಚಾನಲ್‌ಗೆ ಸೇರಿ,
ಇ-ಪೇಪರ್ ಉಚಿತವಾಗಿ
ಪಡೆಯಿರಿ
www.hampitimes.com, epaper.hampitimes.com







ಹಂಪಿ ಟೈಮ್ಸ್ ಚಾನಲ್
ವಿಜಯನಗರದ ಹೆಮ್ಮೆ
FREE!
hampitimes epaper
save your mobile space !
SCAN QR CODE TO JOIN FOLLOW
HAMPI TIMES
whatsapp channel

Advertising can also help to create or develop a distinctive brand for your business.
ನಿಮ್ಮ ಹೊಸ ಉತ್ಪನ್ನ ಬಿಡುಗಡೆಗಳು, ವಿಶೇಷ ಕೊಡುಗೆಗಳು ಮತ್ತು ಸುಧಾರಣೆಗಳ ಬಗ್ಗೆ ಹಾಗೂ ಪ್ರವೇಶ ಕುರಿತು ಸಂಭಾವ್ಯ ಮತ್ತು ಪ್ರಸ್ತುತ ಗ್ರಾಹಕರಿಗೆ ಮಾಹಿತಿ ನೀಡಲು ಬಯಸಿದ್ದೀರಾ?
ಇಂದೇ ಸಂಪರ್ಕಿಸಿ
ಹಂಪಿ ಟೈಮ್ಸ್ : ಮೊ: 9448633038

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA